
08 ಮಾರ್ಚ್ 2026 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 352 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಪಶ್ಚಿಮ ಏಷ್ಯಾದಲ್ಲಿ ಯುದ್ಧದ ಪರಿಸ್ಥಿತಿ ಮುಂದುವರೆದಿದ್ದು, ಕುವೈತ್ ಹಾಗು ಇಸ್ರೇಲ್‌ನಲ್ಲಿರುವ ಅಮೇರಿಕಾದ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ದೊಡ್ಡ ಮಟ್ಟದಲ್ಲಿ ಡ್ರೋನ್ ದಾಳಿ ನಡೆಸಿದೆ ಎಂದು ಸೇನೆ ತಿಳಿಸಿದೆ.




ಟ್ರೋಫಿ ಗೆದ್ದಿರುವುದು ಸೌಹಾರ್ದತೆಯ ಮುನ್ಸೂಚನೆ! 2



ಹೆಣ್ಣಿನ ಆತ್ಮಗೌರವದ ದಾಖಲೀಕರಣದ ಅನನ್ಯತೆ » 3



ಪೌರ ಕಾರ್ಮಿಕರಿಗೆ ಮನೆಗಳ ಹಸ್ತಾಂತರಿಸಿ » 4


# ಎಲ್‌ಪಿಜಿ ಸಿಲಿಂಡರ್ ದರ ಏರಿಕೆ

## ಗೃಹ ಬಳಕೆ-60 ರೂ., ವಾಣಿಜ್ಯ-114ರೂ. ತುಟ್ಟಿ | ಪಶ್ಚಿಮ ಏಷ್ಯಾ ಸಂಘರ್ಷ: ತೈಲ ಪೂರೈಕೆ ವ್ಯತ್ಯಯ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ತೈಲ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದ ನೇರ ಪರಿಣಾಮ ಗ್ರಾಹಕರ ಮೇಲೆ ತಟ್ಟಿದೆ. ಹೀಗಾಗಿ ಶನಿವಾರದಿಂದಲೇ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ 60ರೂ. ಹಾಗು ವಾಣಿಜ್ಯ ಬಳಕೆಯ ಸಿಲಿಂಡರ್ ದರ 114.5ರೂ.ಗೆ ಏರಿಸಲಾಗಿದೆ.

ಇಂಡಿಯನ್ ಆಯಿಲ್ ಕಾರ್ಪೋರೇಷನ್ (ಐಒಸಿ) ಪ್ರಕಾರ, ದರ ಏರಿಕೆಯೊಂದಿಗೆ ಸಬ್ಸಿಡಿಯೇತರ 14.2 ಕೆ.ಜಿ ಗೃಹ ಬಳಕೆಯ ಸಿಲಿಂಡರ್ ದರ ದೆಹಲಿಯಲ್ಲಿ 913ಗೆ ತಲುಪಿದೆ. ಈ ಹಿಂದೆ 853 ಇತ್ತು. ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಎಲ್‌ಪಿಜಿ ದರ ಏರಿಕೆಯಾಗುತ್ತಿರುವುದು ಇದು ಎರಡನೇ ಬಾರಿಯಾಗಿದೆ. ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಲ್ಬಣಗೊಂಡಿರುವ ಜಾಗತಿಕ ತೈಲ ಬಿಕ್ಕಟ್ಟಿನ ಪರಿಣಾಮವೇ ಬೆಲೆ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಶನಿವಾರದಿಂದಲೇ ಪರಿಷ್ಕೃತ ದರ ಜಾರಿಗೆ ಬರಲಿದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ 50 ಏರಿಕೆ ಮಾಡಲಾಗಿತ್ತು. ಉಜ್ವಲಾ ಯೋಜನೆಯ ಫಲಾನುಭವಿಗಳು 14.5 ಕೆ.ಜಿಯ ಸಿಲಿಂಡರ್‌ಗೆ



300 ಸಬ್ಸಿಡಿ ಪಡೆಯಲಿದ್ದಾರೆ. ಇದು ವರ್ಷಕ್ಕೆ 12 ಸಿಲಿಂಡರ್‌ಗೆ ಮಾತ್ರ ಸೀಮಿತ. 19 ಕೆ.ಜಿ.ಯ ವಾಣಿಜ್ಯ ಬಳಕೆ ಸಿಲಿಂಡರ್ ದರ ಈ ವರ್ಷ 302.50 ಏರಿಕೆಯಾಗಿದೆ. ಮಾರ್ಚ್ 1 ರಂದಷ್ಟೇ ಸಿಲಿಂಡರ್‌ಗೆ 28ರೂ.ಗೆ ಏರಿಕೆ ಮಾಡಲಾಗಿತ್ತು. ಬೆಂಗಳೂರಿನಲ್ಲಿ ಸಬ್ಸಿಡಿ ಇಲ್ಲದ ಎಲ್‌ಪಿಜಿ ಬೆಲೆ 14.2 ಕೆಜಿ ಸಿಲಿಂಡರ್‌ಗೆ 855.50 ರೂಪಾಯಿ ಆಗಿದೆ. ವಾಣಿಜ್ಯ ಬಳಕೆ ಇಂಧನ 19 ಕೆಜಿ ದರ 1,814 ರೂಪಾಯಿ ಆಗಿದೆ.

ದೇಶದಲ್ಲಿ ಇಂಧನ ಕೊರತೆ ಇಲ್ಲ:

ನಾಗರಿಕರಿಗೆ ಕೈಗೆಟುಕುವ ಮತ್ತು ದೀರ್ಘಕಾಲಿಕ ಇಂಧನ ಲಭ್ಯವಾಗುವಂತೆ ಮಾಡುವುದು ನಮ್ಮ ಆದ್ಯತೆ. ಭಾರತದಲ್ಲಿ ಇಂಧನದ ಯಾವುದೇ ಕೊರತೆ ಇಲ್ಲ. ಭಾರತದಲ್ಲಿ ಸಾಕಷ್ಟು ಇಂಧನ ಸಂಗ್ರಹವಿದೆ, ಸರಬರಾಜು ಹಾಗು ವಿತರಣಾ ವ್ಯವಸ್ಥೆಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಕಂಪನಿ ಹೇಳಿದೆ.

ಸರ್ಕಾರದ ಮೂಲಗಳು ಹಾರ್ಮುಜ್ ಸಮುದ್ರಸಂಧಿಯ ಮೂಲಕ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಬಗ್ಗೆ ಆತಂಕಗಳಿದ್ದರೂ, ಕಚ್ಚಾ ತೈಲ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಎಲ್‌ಪಿಜಿ ಸರಬರಾಜಿನ ವಿಷಯದಲ್ಲಿ ಭಾರತ ಉತ್ತಮ ಸ್ಥಿತಿಯಲ್ಲಿದೆ ಎಂದು ತಿಳಿಸಿವೆ.

### ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ



ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿಹೋಗಿರುವ ಸಮಯದಲ್ಲಿಯೇ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದ್ದಾರೆ. ಈ ಏರಿಕೆ ಅನಿವಾರ್ಯವಲ್ಲ, ಇದು ಶರಣಾಗತಿಯನ್ನೇ ದೇಶದ ಕಾರ್ಯತಂತ್ರವೆಂದು ತಪ್ಪಾಗಿ ತಿಳಿದುಕೊಂಡ ವಿದೇಶಾಂಗ ನೀತಿಯ ಫಲವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಅನುಮತಿ ಮೇಲೆ ಅವಲಂಬಿತರಾಗಿಲ್ಲ:

ರಷ್ಯಾದಿಂದ ತೈಲ ಖರೀದಿಸಲು ಭಾರತಕ್ಕೆ ಅಮೇರಿಕಾ 30 ದಿನಗಳ ವಿನಾಯಿತಿ ನೀಡಿದೆ ಎಂಬ ವಿಚಾರಕ್ಕೆ ಭಾರತ ಖಡಕ್ ಪ್ರತಿಕ್ರಿಯೆ ನೀಡಿ, ಅನುಮತಿ ಮೇಲೆ ನಾವು ಎಂದಿಗೂ ಅವಲಂಬಿತರಾಗಿಲ್ಲ ಎಂದು ಸ್ಪಷ್ಟಪಡಿಸಿದೆ.

ಇರಾನ್-ಯುಎಸ್-ಇಸ್ರೇಲ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿ ಮಾರ್ಗದಲ್ಲಿ ಉದ್ವಿಗ್ನತೆ ಉಂಟಾಗಿರುವುದರಿಂದ, ಭಾರತವು ಕಡಿಮೆ ಬೆಲೆಗೆ ನೀಡುವ ಯಾವುದೇ ಮೂಲದಿಂದ ಕಚ್ಚಾ ತೈಲವನ್ನು ಖರೀದಿಸುವುದನ್ನು ಮುಂದುವರಿಸುತ್ತೇವೆ. ಅಡೆತಡೆಗಳ ಹೊರತಾಗಿಯೂ ಭಾರತದ ಇಂಧನ ಸರಬರಾಜು ಸುರಕ್ಷಿತವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಹಾರ್ಮುಜ್ ಮಾರ್ಗದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಹೊರತಾಗಿಯೂ, ಭಾರತದ ಇಂಧನ ಪೂರೈಕೆ ಸುರಕ್ಷಿತ ಮತ್ತು ಸ್ಥಿರವಾಗಿದೆ. ಭಾರತವು ತನ್ನ ಕಚ್ಚಾ ತೈಲ ಮೂಲಗಳನ್ನು 27 ರಿಂದ 40 ದೇಶಗಳಿಗೆ ವಿಸ್ತರಿಸಿದೆ. ಪರ್ಯಾಯ ಪೂರೈಕೆ ಮಾರ್ಗಗಳನ್ನು ಖಚಿತಪಡಿಸಿಕೊಂಡಿದೆ. ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ, ಭಾರತವು ಕೈಗೆಟುಕುವ ದರಗಳು ಲಭ್ಯವಿರುವಲ್ಲೆಲ್ಲಾ ತೈಲವನ್ನು ಖರೀದಿಸುತ್ತದೆ ಎಂದು ತಿಳಿಸಿದೆ.

# ಉದ್ಯೋಗ ಮೇಳ: 3,056 ಮಂದಿಗೆ ಉದ್ಯೋಗಾವಕಾಶ

## 6,210 ಅಭ್ಯರ್ಥಿಗಳು ನೋಂದಣಿ : 3,225 ಮಂದಿ ಭಾಗಿ : 149 ಕಂಪನಿಗಳಿಂದ ಸಂದರ್ಶನ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಇಲಾಖೆಯಿಂದ ಶನಿವಾರ ನಗರದ ಇಂಜಿನೀಯರಿಂಗ್ ಕಾಲೇಜಿನಲ್ಲಿ ನಡೆದ ಉದ್ಯೋಗ ಮೇಳಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಒಟ್ಟು 6,210 ಮಂದಿ ನೋಂದಣಿ ಮಾಡಿಕೊಂಡಿದ್ದು, 3,056 ಅಭ್ಯರ್ಥಿಗಳಿಗೆ ಈ ಸಂದರ್ಭದಲ್ಲಿ ಉದ್ಯೋಗಾವಕಾಶ ದೊರೆತಿದೆ.

ಉದ್ಯೋಗ ಮೇಳಕ್ಕೆ ಜಿಲ್ಲೆ ಸೇರಿ ವಿವಿಧ ಭಾಗಗಳಿಂದ ಸಾವಿರಾರು ಉದ್ಯೋಗಾರ್ಥಿಗಳು ಆಗಮಿಸಿ ತಮ್ಮ ಕೌಶಲ್ಯಕ್ಕೆ ತಕ್ಕ ಉದ್ಯೋಗಾವಕಾಶಗಳಿಗಾಗಿ ಸಂದರ್ಶನದಲ್ಲಿ ಬೆಳಿಗ್ಗೆಯಿಂದಲೇ ಭಾಗವಹಿಸಿದರು. ಈ ಮೇಳದಲ್ಲಿ ಭಾಗವಹಿಸಲು ಒಟ್ಟು 6,210 ಮಂದಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರು. ಆದರೆ, 3,225 ಮಂದಿ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದರು.

ಇದರಲ್ಲಿ 1,860 ಮಹಿಳಾ ಅಭ್ಯರ್ಥಿಗಳು ಹಾಗೂ 1,365 ಪುರುಷ ಅಭ್ಯರ್ಥಿಗಳು ಹಾಜರಿದ್ದರು.

ಮೇಳದಲ್ಲಿ ಒಟ್ಟು 149 ಕಂಪನಿಗಳು ಭಾಗವಹಿಸಿದ್ದು, ಸುಮಾರು 30



ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳನ್ನು ನೀಡಲಾಗಿತ್ತು. ಅಭ್ಯರ್ಥಿಗಳು ಹಲವು ಕಂಪನಿಗಳ ಸಂದರ್ಶನಗಳಲ್ಲಿ ಭಾಗವಹಿಸಿದ್ದ ಹಿನ್ನಲೆಯಲ್ಲಿ ಒಟ್ಟು 9,675 ಸಂದರ್ಶನಗಳು ನಡೆದವು.

ಈ ಪ್ರಕ್ರಿಯೆಯಲ್ಲಿ 1,314 ಅಭ್ಯರ್ಥಿಗಳು ನೇರವಾಗಿ ಆಯ್ಕೆಯಾಗಿದ್ದು, 241 ಮಂದಿಗೆ ಮುಂದಿನ ಹಂತದ ಸಂದರ್ಶನಕ್ಕಾಗಿ ಲೆಟರ್ ಆಫ್ ಇಂಟೆಂಟ್ ನೀಡಲಾಗಿದೆ. ಜೊತೆಗೆ 1,501 ಅಭ್ಯರ್ಥಿಗಳು ಮುಂದಿನ ಹಂತಕ್ಕೆ ಶಾರ್ಟ್‌ಲಿಸ್ಟ್ ಆಗಿದ್ದಾರೆ. ಒಟ್ಟಾರೆ ಈ ಉದ್ಯೋಗ ಮೇಳದಿಂದ 3,056 ಮಂದಿ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರೆತಿದ್ದು, ಅದರಲ್ಲಿ 1,060 ಮಹಿಳಾ ಅಭ್ಯರ್ಥಿಗಳು ಪ್ರಯೋಜನ ಪಡೆದಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

## ಆಟೋ ಪಲ್ಟಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಚಾಲಕ ಏಕಾಏಕಿ ಬ್ರೇಕ್ ಹಾಕಿದ್ದರಿಂದ ಆಟೋ ರಸ್ತೆ ಪಕ್ಕದ ಚರಂಡಿಗೆ ಬಿದ್ದು ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಸವನಾಯಕನಹಳ್ಳಿ ಬಸ್ ನಿಲ್ದಾಣ ಸಮೀಪ ನಡೆದಿದೆ.

ಹಳ್ಳಿಮೈಸೂರು ಹೋಬಳಿ ಕೆರಗೋಡು ಗ್ರಾಮದ ಕೆ.ಎಂ.ಶಿವರಾಜು (33) ಮೃತರು. ಸಂತೋಷ್ ಎಂಬುವವರು ಗಾಯಗೊಂಡಿದ್ದಾರೆ.

ಗ್ರಾಮದಿಂದ ಹಾಸನಕ್ಕೆ ಬರುತ್ತಿದ್ದಾಗ ಆಟೋ ಚಾಲಕ ದಿಢೀರನೆ ಜೋರಾಗಿ ಬ್ರೇಕ್ ಹಾಕಿದ್ದರಿಂದ ಆಯತಪ್ಪಿ ರಸ್ತೆ ಬದಿಯ ಚರಂಡಿಗೆ ಬಿದ್ದಿದೆ. ಎದೆ ಮತ್ತು ದೇಹದ ಇತರ ಭಾಗಗಳಿಗೆ ತೀವ್ರ ಪೆಟ್ಟಾಗಿದ್ದ ಶಿವರಾಜು ಅವರನ್ನು ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

# ಮಾಹಿತಿ ಹಕ್ಕು ಕಾಯ್ದೆ ಪ್ರಜಾಪ್ರಭುತ್ವಕ್ಕೆ ಆಮ್ಲಜನಕ

## ಸಂವಿಧಾನ ಉಳಿಸಲು ಪ್ರಬಲ ಅಸ್ತ್ರ: ಆಯುಕ್ತ ರುದ್ರಣ್ಣ ಹರ್ತಿಕೋಟೆ ಅಭಿಮತ

• ಪ್ರಜೋದಯ ವರದಿ

**ಹಾಸನ:** ಮಾಹಿತಿ ಹಕ್ಕು ಕಾಯ್ದೆ ಪ್ರಜಾಪ್ರಭುತ್ವಕ್ಕೆ ಆಮ್ಲಜನಕ ಇದ್ದಂತೆ, ಸಮರ್ಪಕವಾಗಿ ಬಳಸಿಕೊಂಡರೆ ಸಂವಿಧಾನ ಉಳಿಸಲು ಪ್ರಬಲ ಅಸ್ತ್ರವಾಗಲಿದೆ ಎಂದು ರಾಜ್ಯ ಮಾಹಿತಿ ಹಕ್ಕು ಆಯುಕ್ತ ರುದ್ರಣ್ಣ ಹರ್ತಿಕೋಟೆ ಅವರು ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಶನಿವಾರ ಸಾಂಸ್ಕೃತಿಕ ಸಮಿತಿಯ ಸ್ಟಡಿ ವಿತ್ ಸೊಸೈಟಿ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ಮಾಹಿತಿ ಹಕ್ಕು ಕಾಯ್ದೆಯ ಪರಿಣಾಮಕಾರಿ ಹಾಗು ಆರೋಗ್ಯಪೂರ್ಣ ಆರೋಗ್ಯಪೂರ್ಣ ಬಳಕೆ ಕುರಿತಾಗಿ ಉಪನ್ಯಾಸ-ಸಂವಾದದಲ್ಲಿ ಮಾತನಾಡಿದ ಅವರು, ತನಿಖಾ ಮತ್ತು ಅಭಿವೃದ್ಧಿ ಪತ್ರಿಕೋದ್ಯಮಕ್ಕೆ ಮಾಹಿತಿ



ಹಕ್ಕು ಕಾಯ್ದೆ ಹೆಚ್ಚಿನ ಅನುಕೂಲವಾಗಲಿದೆ. ಇದರಿಂದ ಭ್ರಷ್ಟಾಚಾರ ಮುಕ್ತ ಮಾಡಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು.

ಡಾ.ಅಂಬೇಡ್ಕರ್ ಪತ್ರಿಕೋದ್ಯಮ ಪ್ರಾಣವಾಯು ಎಂದರೆ, ಮಹಾತ್ಮಾ ಗಾಂಧಿ ಸೇವೆ ಅಂದರು. ಆದರೀಗ ಅದು ಇದೆಯೇ ಎಂಬುದು ಪ್ರಶ್ನೆಯಾಗಿದೆ. ಇಂದು ನಾವು ಸಹಿಷ್ಣುತೆ ಕಡೆಗೆ ನಾವು ಹೋಗಬೇಕಾದ ಅಗತ್ಯ ಇದೆ. ಮಾಧ್ಯಮ ಇಂದು ವಿಶ್ವಾಸ ಉಳಿಸಿಕೊಂಡಿಲ್ಲ ಗೋಧಿ ಮೀಡಿಯಾ ಈಗ ಸುಳ್ಳು ಉತ್ಪಾದಕರು ಎಂಬ ಟೀಕೆ ಹೋಗಲಾಡಿಸಬೇಕು ಎಂದು ಹೇಳಿದರು.

ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕೊಡುವುದು ಪತ್ರಿಕೋದ್ಯಮ ಹಾಗು ಮಾಹಿತಿ ಹಕ್ಕು ಕಾಯ್ದೆಯ ಉದ್ದೇಶ. ಆದರೆ ಇವೆರಡೂ ಉದ್ದೇಶ ಮೀರಿ ಬೇರೆ ಬೇರೆ ದಾರಿಯಲ್ಲಿ ಸಾಗುತ್ತಿರುವುದು ಕಳವಳಕಾರಿ. ಹೀಗಾಗಿ ಆತ್ಮಾವಲೋಕನ ಅಗತ್ಯ. ಭಯೋತ್ಪಾದನೆ, ಕೋಮುವಾದ, ಸಾಂಸ್ಕೃತಿಕ ದಿವಾಳಿತನ ಸಂದರ್ಭದಲ್ಲಿ ನಾವು ನಮ್ಮ ಕೆಲಸ ಮಾಡುತ್ತಿಲ್ಲ, ಇಚ್ಛಾಶಕ್ತಿ ಎಚ್ಚರಿಸುತ್ತಿಲ್ಲ, ಅಧಿಕಾರಿಗಳಿಗೆ ಮಾಹಿತಿ ಕೊಡುವ ಕೆಲಸ ಆಗಬೇಕು ಎಂದು ಹೇಳಿದರು.

ಪತ್ರಕರ್ತರಲ್ಲಿ ಸುಳ್ಳು-ಸತ್ಯ ನಡುವಿನ ಪರಿಶೀಲನೆ ಮಾಡುವುದು ಕಡಿಮೆಯಾಗಿದೆ. ದಿನದಿಂದ ದಿನಕ್ಕೆ ನೈತಿಕತೆ ಕಳೆದು ಕೊಳ್ಳುತ್ತಿದ್ದೇವೆ, ಹಿಂದೆ ಗೌರವ ಡಾಕ್ಟರೇಟ್ ಮಾರಾಟ ಮಾಡುತ್ತಿದ್ದುದರ ಬಗ್ಗೆ ಟೀಕೆ ಮಾಡುತ್ತಿದ್ದವು. ಈಗ ಮೀಡಿಯಾ ಪ್ರಶಸ್ತಿ ಮಾರುವ ಹಂತಕ್ಕೆ ಇಳಿದರೆ ನೈತಿಕತೆ ಎಲ್ಲಿ ಉಳಿಯಲಿದೆ. ಹೆಚ್ಚು ಮಾಧ್ಯಮಗಳು ಇಂದು ಬಂಡವಾಳಶಾಹಿಗಳ ಹಿಡಿತದಲ್ಲಿವೆ, ಆದರೂ ನಾವು ಸಾಮಾಜಿಕ ಹೊಣೆಗಾರಿಕೆ ಬಿಡಬಾರದು ಎಂದರು.

**250 ವರ್ಷಗಳ ಇತಿಹಾಸ:**

ಮತ್ತೊಬ್ಬ ಆಯುಕ್ತರಾದ ಕೆ. ಬದ್ರುದ್ದೀನ್ ಅವರು ಮಾತನಾಡಿ, ಮಾಹಿತಿ ಹಕ್ಕು ದೇಶದಲ್ಲಿ ಜಾರಿಗೆ ಬಂದು 20 ವರ್ಷ ಆಗಿದೆ. ಆದರೆ ಇದಕ್ಕೆ 250 ವರ್ಷಗಳ ಇತಿಹಾಸ ಇದೆ. 1766 ರಲ್ಲಿ ಮೊದಲಿಗೆ ಸ್ವೀಡನ್‌ನಲ್ಲಿ ಅನುಷ್ಠಾನಕ್ಕೆ ಬಂತು.

» ನಾಲ್ಕನೇ ಪುಟದಲ್ಲಿ

# ಪವರ್ ಮ್ಯಾನ್‌ಗಳ ಸೇವೆ ಶ್ಲಾಘನೀಯ



• ಪ್ರಜೋದಯ ವರದಿ

**ಹಾಸನ:** ಪೌರ ಕಾರ್ಮಿಕರಂತೆ ಪವರ್ ಮ್ಯಾನ್‌ಗಳು ಸಹ ಶ್ರಮ ವಹಿಸಿ ಕರ್ತವ್ಯ ನಿರ್ವಹಿಸುತ್ತಾರೆ, ಅವರಿಲ್ಲದಿದ್ದರೆ ಬೆಳಕಿನ ವ್ಯವಸ್ಥೆಗೆ ಪರದಾಡಬೇಕಾಗುತ್ತದೆಂದು ಶಾಸಕ ಹೆಚ್.ಪಿ.ಸ್ವರೂಪ್ ಹೇಳಿದರು.

ಹಾಸನ ಸೆಸ್ಕ್ ವಿಭಾಗ ವ್ಯಾಪ್ತಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಲೈನ್ ಮ್ಯಾನ್ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸೆಸ್ಕ್‌ಗೆ ಸಂಬಂಧಿಸಿದಂತೆ ದೂರುಗಳು ಇಲ್ಲ, ಎಲ್ಲಾ ಅಧಿಕಾರಿ ಹಾಗು ಸಿಬ್ಬಂದಿ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಮೆಚ್ಚುಗೆ ಸೂಚಿಸಿದರು.

ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡುವುದು ಸಾಕಷ್ಟು ಸವಾಲುಗಳಿಂದ ಕೂಡಿರುತ್ತದೆ. ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವಾಗ ಜಾಗರೂಕರಾಗಿರಬೇಕು. ಸಿಬ್ಬಂದಿಗೆ ಸುರಕ್ಷತಾ ಪರಿಕರಗಳನ್ನು ತಪ್ಪದೇ ನೀಡಬೇಕೆಂದು ಸಲಹೆ ನೀಡಿದರು.

(ನಾಲ್ಕನೇ ಪುಟದಲ್ಲಿ)

# ಜಿಲ್ಲೆಯಲ್ಲಿ ಇನ್ಮುಂದೆ ಪ್ರತಿ ವರ್ಷ ಉದ್ಯೋಗ ಮೇಳ: ಸಂಸದ

## 180ಕ್ಕೂ ಹೆಚ್ಚು ಕಂಪನಿಗಳು ಭಾಗಿ: 3 ಸಾವಿರ ಆಕಾಂಕ್ಷಿಗಳು ನೋಂದಣಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಯುವ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ. ಇನ್ಮುಂದೆ ಪ್ರತಿ ವರ್ಷ ಜಿಲ್ಲೆಯಲ್ಲಿ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ಶನಿವಾರ ಏರ್ಪಡಿಸಿದ್ದ ಯುವ ಉದ್ಯೋಗ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉದ್ಯೋಗ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ 180ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿವೆ. ಸಾವಿರಾರು ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡಿದ್ದು, ವಿವಿಧ ಕಂಪನಿಗಳಲ್ಲಿ ಖಾಲಿ ಇರುವ ಉದ್ಯೋಗಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದರು.



### ಉದ್ಯೋಗ ಸೃಷ್ಟಿ ಮನೋಭಾವ ಬೆಳೆಯಲಿ

ಇಂದಿನ ದಿನಗಳಲ್ಲಿ ಉದ್ಯೋಗ ಹುಡುಕುವುದಕ್ಕಿಂತ ಉದ್ಯೋಗ ಸೃಷ್ಟಿ ಮಾಡುವ ಮನೋಭಾವ ಯುವಕರಲ್ಲಿ ಬೆಳೆಬೇಕು. ಯುವಕರು ಮೊಬೈಲ್ ಬಳಕೆಯಿಂದ ದೂರವಿದ್ದು ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಕೌಶಲ್ಯಾಭಿವೃದ್ಧಿ ಇದ್ದರೆ ಉದ್ಯೋಗ ಸಿಗುವುದು ಸುಲಭ. ಉದ್ಯೋಗ ಸಿಗದ ಅಭ್ಯರ್ಥಿಗಳು ತರಬೇತಿ ಪಡೆದು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಶಿವಕಾಂತಮ್ಮ ಅವರು ಹೇಳಿದರು.

ಒಂದೇ ಸೂರಿನಡಿಯಲ್ಲಿ 180ಕ್ಕೂ ಹೆಚ್ಚು ಕಂಪನಿಗಳು ಆಗಮಿಸಿರುವುದರಿಂದ ಜಿಲ್ಲೆಯ ಎಲ್ಲಾ ಯುವಕ ಯುವತಿಯರು ಆಗಮಿಸಿ ಸದುಪಯೋಗವನ್ನು ಪಡೆದುಕೊಂಡು ತಮ್ಮ ಜೀವನವನ್ನು ಆರ್ಥಿಕತೆಗೆ ಕೊಂಡೊಯ್ಯಬೇಕು ಎಂದರು.

**ಉದ್ಯೋಗ ಸೃಷ್ಟಿ ಮನೋಭಾವ ಬೆಳೆಯಲಿ:**

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ ನಾಯಕ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಉದ್ಯೋಗ ಹುಡುಕುವುದಕ್ಕಿಂತ ಉದ್ಯೋಗ ಸೃಷ್ಟಿ ಮಾಡುವ ಮನೋಭಾವ ಯುವಕರಲ್ಲಿ ಬೆಳೆಬೇಕು. ಯುವಕರು ಮೊಬೈಲ್ ಬಳಕೆಯಿಂದ ದೂರವಿದ್ದು ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಕೌಶಲ್ಯಾಭಿವೃದ್ಧಿ ಇದ್ದರೆ ಉದ್ಯೋಗ ಸಿಗುವುದು ಸುಲಭ. ಉದ್ಯೋಗ ಸಿಗದ ಅಭ್ಯರ್ಥಿಗಳು ತರಬೇತಿ ಪಡೆದು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಉದ್ಯೋಗ ಮೇಳದ ಮೂಲಕ ಹೆಚ್ಚಿನ ಯುವಕರಿಗೆ

» ನಾಲ್ಕನೇ ಪುಟದಲ್ಲಿ

# ಕಾಲು ಜಾರಿ ನೀರು ಪಾಲಾದ ಇಬ್ಬರು ವಿದ್ಯಾರ್ಥಿಗಳು

• ಪ್ರಜೋದಯ ವರದಿ

**ಸಕಲೇಶಪುರ:** ಜಾನುವಾರುಗಳಿಗೆ ನೀರು ಕುಡಿಸಲು ಕೆರೆಗೆ ತೆರಳಿದ್ದ ವೇಳೆ ಕಾಲು ಜಾರಿ ಬಿದ್ದು ಇಬ್ಬರು ಪಿಯುಸಿ ವಿದ್ಯಾರ್ಥಿಗಳು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಾಳ್ಳುಪೇಟೆ ಸಮೀಪದ ಓಂ ನಗರದಲ್ಲಿ ಶನಿವಾರ ನಡೆದಿದೆ.

ಮೃತರನ್ನು ಮಿಥುನ್ (17) ಮತ್ತು ಭರತ್ (17) ಎಂದು ಗುರುತಿಸಲಾಗಿದೆ. ಇಬ್ಬರೂ ಪ್ರಥಮ ಹಾಗು ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದರು. ಶನಿವಾರ ಮಧ್ಯಾಹ್ನ 12.30ರ ಸಮಯದಲ್ಲಿ ಜಾನುವಾರುಗಳಿಗೆ ನೀರು ಕುಡಿಸಲು ಕೆರೆಗೆ ತೆರಳಿದ್ದ ವೇಳೆ ಕಾಲು ಜಾರಿ ನೀರಿಗೆ ಬಿದ್ದಿದ್ದಾರೆ. ಒಬ್ಬನನ್ನು ರಕ್ಷಿಸಲು ಮತ್ತೊಬ್ಬ ಮುಂದಾದಾಗ ಇಬ್ಬರೂ ಮುಳುಗಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ



ಕಾರ್ಯಾಚರಣೆ ಮೂಲಕ ಎರಡೂ ಶವಗಳನ್ನು ಹೊರ ತೆಗೆದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಶಾಸಕ ಸಿಮೆಂಟ್ ಮಂಜು ಅವರು ಆಸ್ಪತ್ರೆಗೆ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಂತಾಪ ಸೂಚಿಸಿದರು. ಈ ವೇಳೆ ಅಧಿಕಾರಿಗಳು ಹಾಗು ಪೊಲೀಸ್ ಇಲಾಖೆಗೆ ಶವಪರೀಕ್ಷೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳ ಸಾವು ಅತ್ಯಂತ ದು:ಖದ ವಿಚಾರ. ಮೃತ ವಿದ್ಯಾರ್ಥಿಗಳಿಬ್ಬರೂ ಕೂಲಿ ಕಾರ್ಮಿಕರ ಕುಟುಂಬಕ್ಕೆ ಸೇರಿದ್ದಾರೆ.



ಕುಟುಂಬದ ಏಕೈಕ ಆಸರೆಯಾಗಿದ್ದ ಮಕ್ಕಳು ಸಾವನ್ನಪ್ಪಿರುವುದರಿಂದ ಕುಟುಂಬವೇ ಸಂಕಷ್ಟಕ್ಕೆ ಸಿಲುಕಿದೆ ಯೆಂದು ಹೇಳಿದರು.

ಈ ಹಿನ್ನಲೆಯಲ್ಲಿ ಸರ್ಕಾರದಿಂದ ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದೇನೆ. ಕನಿಷ್ಟ 10 ಲಕ್ಷ ರೂ. ಪರಿಹಾರ ನೀಡುವಂತೆ ಸರ್ಕಾರವನ್ನು ಮನವಿ ಮಾಡುತ್ತೇನೆ. ಅಗತ್ಯವಿದ್ದರೆ ಈ ವಿಚಾರವನ್ನು ವಿಧಾನಸಭೆ ಅಧಿವೇಶನದಲ್ಲಿಯೂ ಪ್ರಸ್ತಾಪಿಸುತ್ತೇನೆಂದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಾಯಪುರದಲ್ಲಿ ಉದ್ರಿಕ್ತರಿಂದ ಪೊಲೀಸರ ಮೇಲೆ ಕಲ್ಲು ತೂರಾಟ



• ಪ್ರಜೋದಯ ವರದಿ

**ಹಾಸನ:** ವ್ಯಕ್ತಿಯ ಅನುಮಾನಾಸ್ಪದ ಸಾವು ಪ್ರಕರಣ ಸಂಬಂಧ ತಾಲ್ಲೂಕಿನ ರಾಯಪುರ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಉದ್ರಿಕ್ತ ಗುಂಪು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ ಘಟನೆ ನಡೆದಿದೆ. ವೀರಾಪುರ ಗ್ರಾಮದ ದೊರೆಸ್ವಾಮಿ (42) ಅವರ ಮೃತದೇಹ ಹಳೇಬೀಡು-ಹಾಸನ ರಸ್ತೆಯ ಬಾರ್ ಮುಂದೆ ಕಾರಿನಲ್ಲಿ ಪತ್ತೆಯಾಗಿತ್ತು.

ಪ್ರಕರಣದ ಸಮಗ್ರ ತನಿಖೆ ನಡೆಸಬೇಕೆಂದು ಗ್ರಾಮಸ್ಥರು ಹಾಗು ಕುಟುಂಬಸ್ಥರು ಶವದೊಂದಿಗೆ ಪ್ರತಿಭಟನೆ ನಡೆಸಿದ್ದರು. ಪರಿಸ್ಥಿತಿ ನಿಯಂತ್ರಣಕ್ಕೆ ಪೊಲೀಸರು ದೌಡಾಯಿಸಿದಾಗ ಕೆಲ ಹೊತ್ತು ವಾಗ್ವಾದ ನಡೆಯಿತು. ಮಾತಿಗೆ ಮಾತು ಬೆಳೆದು ಉದ್ರಿಕ್ತರು ಪೊಲೀಸರತ್ತ ಕಲ್ಲು ತೂರಾಟ ನಡೆಸಿದ್ದಾರೆ. ಆಗ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಪರಿಸ್ಥಿತಿ ನಿಯಂತ್ರಿಸಿದರು.

ಹಾಸನ ಡಿವೈಎಸ್‌ಪಿ ಗಂಗಾಧರಪ್ಪ, ಗ್ರಾಮಾಂತರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕುಮಾರ್, ಕಾನ್ಸ್‌ಟೇಬಲ್‌ಗಳಾದ ಜಮಾಲುದ್ದೀನ್ ಮತ್ತು ಕುಮಾರ್ ಅವರಿಗೆ ಗಾಯಗಳಾಗಿವೆ. ಅವರಿಗೆ ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಯಿತು. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಹಿಳಾ ದಿನಾಚರಣೆಯಲ್ಲಿ ನಾಗರಿಕ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಕರೆ

# ದ್ವೇಷಪರ ಘಟನೆ ವಿರುದ್ಧ ಮಹಿಳಾ ಚಳುವಳಿ ದೃಢವಾಗಲಿ

• ಪ್ರಜೋದಯ ವರದಿ

**ಹಾಸನ:** ದ್ವೇಷಪರ ಘಟನೆಗಳ ವಿರುದ್ಧ ಮಹಿಳಾ ಚಳುವಳಿಗಳು ದೃಢವಾಗಬೇಕು. ದಲಿತ, ಆದಿವಾಸಿ ವಿರೋಧಿ ನೀತಿಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮಹಿಳಾ ಪರ ಹೋರಾಟ, ಸಂವಾದ ಮತ್ತು ವಿಚಾರ ಸಂಕಿರಣಗಳ ಮೂಲಕ ಜಾಗೃತಿ ಮೂಡಿಸಬೇಕಿದೆ ಎಂದು ನಾಗರಿಕ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರು ಹೇಳಿದರು.

ನಗರದ ಹಾಸನಾಂಬ ಕಲಾಭವನದಲ್ಲಿ ಕರ್ನಾಟಕ ರಾಜ್ಯ ದೌರ್ಜನ್ಯ ವಿರೋಧಿ ಒಕ್ಕೂಟ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಜಾತಿಯ ಹೆಸರಿನಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಮೇಲೂ ದಾಳಿಗಳು ನಡೆಯುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಮಹಿಳಾ ಚಳುವಳಿ ಹಲವು ಸವಾಲುಗಳನ್ನು ಎದುರಿಸುತ್ತಾ ಮುಂದೆ ಸಾಗುತ್ತಿದೆ. ದಲಿತ ಹಾಗು ಮುಸ್ಲಿಂ ಮಹಿಳೆಯರ ಮೇಲೆ ಅವಮಾನಕಾರಿ ನಡೆಗಳು ಹೆಚ್ಚುತ್ತಿವೆ. ಹಿಂದೂತ್ವದ ಹೆಸರಿನಲ್ಲಿ ಮಾತನಾಡುವವರು ಮನೆ ಕೆಲಸಗಾರರು ಹಾಗು ಸ್ವಚ್ಛತಾ ಕಾರ್ಮಿಕರನ್ನು ನಿಜವಾಗಿಯೂ ಗೌರವದಿಂದ ನೋಡಿಕೊಳ್ಳುತ್ತಾರೆಯೇ ಎಂದು ಪ್ರಶ್ನಿಸಿದರು.

ಜಾಗತಿಕ ಮಟ್ಟದಲ್ಲಿಯೂ ಯುದ್ಧ ಹಾಗೂ ಸಾಮ್ರಾಜ್ಯಶಾಹಿ ರಾಜಕೀಯದ ಪರಿಣಾಮವಾಗಿ ಸಾಮಾನ್ಯ ಜನರು, ವಿಶೇಷವಾಗಿ ಮಕ್ಕಳು ಬಲಿಯಾಗುತ್ತಿರುವುದು ದುಃಖಕರ ಸಂಗತಿ ಎಂದು ಹೇಳಿದರು. ಗಾಜಾದಲ್ಲಿ ಸಾವಿರಾರು ಜನರು, ಅದರಲ್ಲೂ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಸಾವನ್ನಪ್ಪಿರುವುದು ಮಾನವೀಯ ಸಂಕಟದ ಸೂಚಕ ಎಂದು ಹೇಳಿದರು.

ಸಿಎಎ ಮತ್ತು ಎನ್‌ಆರ್‌ಸಿ ಜಾರಿಗೆ ತಂದ ಸಂದರ್ಭದಲ್ಲಿಯೇ ಪ್ರಶ್ನೆ ಎತ್ತಿದವರ ಮೇಲೆ ದೇಶದ್ರೋಹ ಹಾಗು ಯುಎಪಿಎ ಪ್ರಕರಣಗಳನ್ನು ದಾಖಲಿಸಲಾಯಿತು. ಆದರೆ ಸಾವಿರಾರು ಮುಸ್ಲಿಂ ಮಹಿಳೆಯರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಎಲ್ಲಾ ದಿಕ್ಕುಗಳಿಂದ ಚಳುವಳಿಯನ್ನು ಕುಂಠಿತಗೊಳಿಸಲು ಮೋದಿ ಸರ್ಕಾರ ಪ್ರಯತ್ನಿಸಿತು. ಆದರೆ, ಚಳುವಳಿ ಬಲವಾಗಿದ್ದ ಕಾರಣ ಅವರ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಇದು ಜನಚಳುವಳಿಯ ತಾಕತ್ತಿಗೆ ಉದಾಹರಣೆ ಎಂದು ಹೇಳಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ ಅವರು ಮಾತನಾಡಿ, ಮಹಿಳೆಯರು ಸ್ವತಂತ್ರವಾಗಿ ದುಡಿಯಲು ಮತ್ತು ಪ್ರಶ್ನಿಸಲು ಮನರೇಗಾ ಯೋಜನೆ ದೊಡ್ಡ ಮಾನಸಿಕ ಬಲ ನೀಡಿತ್ತು. ಎಡಪಕ್ಷಗಳ ಹೋರಾಟದ ಫಲವಾಗಿ ಜಾರಿಯಾದ ಈ ಯೋಜನೆ ಗ್ರಾಮೀಣ ಮಹಿಳೆಯರ ಆರ್ಥಿಕ ಬಲವರ್ಧನೆಗೆ ಕಾರಣವಾಗಿತ್ತು. ಆದರೆ ಈಗ ವಿವಿಧ ಹೆಸರಿನಲ್ಲಿ ಈ ಯೋಜನೆಯ ಮೂಲ ಉದ್ದೇಶವನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಮನರೇಗಾ ಯೋಜನೆ ತನ್ನ ಮೂಲ ಸ್ವರೂಪ

» ನಾಲ್ಕನೇ ಪುಟದಲ್ಲಿ




ದೌರ್ಜನ್ಯಗಳನ್ನು ಎದುರಿಸಲು ಪದೇ ಪದೇ ಅವತಾರ ಪುರುಷರೇ ಯಾಕೆ ಬರಬೇಕು. ನಾವು ರಾಮ ಅಥವಾ ಕೃಷ್ಣರಂತೆ ದೌರ್ಜನ್ಯಕಾರರನ್ನು ಕೊಲ್ಲುವುದಿಲ್ಲ. ಬದಲಿಗೆ ದೌರ್ಜನ್ಯ ಎಸಗುವ ಕೈಗಳನ್ನು ಸೋಲಿಸುವುದು ಮತ್ತು ಮನಸ್ಥಿತಿಗಳನ್ನು ಬದಲಿಸುವುದರ ಮೂಲಕವೇ ನಾವು ಜಯ ಸಾಧಿಸುತ್ತೇವೆ. ಹೀಗೆ ಇತಿಹಾಸವನ್ನು ಬರೆಯುತ್ತೇವೆ.

– ಡಾ.ಸಬಿತಾ ಬನ್ನಾಡಿ, ಸಾಹಿತಿ

### ಸಮಾವೇಶಕ್ಕೂ ಹಕ್ಕೋತ್ತಾಯ ಜಾಥಾ

ಸಮಾವೇಶಕ್ಕೂ ಮುನ್ನ ಹಾಸನದ ಪ್ರಮುಖ ಬೀದಿಗಳಲ್ಲಿ ನೂರಾರು ಮಹಿಳೆಯರು, ಸಮತೆಯೆಡೆಗೆ ನಮ್ಮ ನಡಿಗೆ ದೌರ್ಜನ್ಯವನೆಂದೂ ಸಹಿಸುವುದಿಲ್ಲ, ನ್ಯಾಯ ದಕ್ಕದೆ ಬಿಡುವುದೇ ಇಲ್ಲ ಎಂಬ ಘೋಷಣೆಯೊಂದಿಗೆ ಹಕ್ಕೋತ್ತಾಯ ಜಾಥಾ ನಡೆಸಿದರು. ಈ ವೇಳೆ ಮಹಿಳೆಯರು ಕೋಲಾಟ ಮತ್ತು ಡೊಳ್ಳು ಬಾರಿಸುವ ಮೂಲಕ ಗಮನ ಸೆಳೆದರು. ಇದೇ ವೇಳೆ ಹಾಸನ ಮಣ್ಣಿನ ಹೆಣ್ಣು ದನಿಗಳು ಎಂಬ ಪುಸ್ತಕವೂ ಬಿಡುಗಡೆಯಾಯಿತು.

C M Y K

# ಜಮ್ಮು ಮತ್ತು ಕಾಶ್ಮೀರ ರಣಜಿ ಟ್ರೋಫಿ ಗೆದ್ದಿರುವುದು ಸೌಹಾರ್ದತೆ ಮೂಡುವ ಮುನ್ಸೂಚನೆ!

## ಚೊಚ್ಚಲ ರಣಜಿ ಟ್ರೋಫಿ ಗೆದ್ದ ಕಣಿವೆ ರಾಜ್ಯದಲ್ಲಿ ಶಾಂತಿ ನೆಲೆಸುತ್ತಾ?

**ಕಳೆದ ಕೆಲವು ವರ್ಷಗಳಿಂದ ಭಯೋತ್ಪಾದನೆಯಂತಹ ಕೃತ್ಯಗಳಿಂದ ಸುದ್ದಿಯಾಗುತ್ತಿದ್ದ ಜಮ್ಮು ಮತ್ತು ಕಾಶ್ಮೀರ ಇದೀಗ ರಣಜಿ ಟ್ರೋಫಿ ಗೆದ್ದಿದೆ. ಈ ಹಿನ್ನೆಲೆ ಭಯೋತ್ಪಾದಕದಂತಹ ಕೃತ್ಯಗಳೇ ಹೆಚ್ಚು ನಡೆಯುತ್ತಿದ್ದ ಈ ರಾಜ್ಯದಲ್ಲಿ ಮತ್ತೆ ಕ್ರೀಡಾ ಗಾಳಿ ಬೀಸಿದ್ದು, ಇಲ್ಲಿ ಶಾಂತಿ ಮತ್ತು ಸೌಹಾರ್ದತೆ ನೆಲೆಯೂರಲು ಮುನ್ನುಡಿ ಬರೆದಂತಿದೆ. ಈ ಕುರಿತು ಪತ್ರಿಕೋದ್ಯಮ ವಿದ್ಯಾರ್ಥಿ ಕೆ ಎನ್ ರಂಗನಾಥ್ ಚಿತ್ರದುರ್ಗ ತಮ್ಮ ಅಂಕಣದಲ್ಲಿ ವಿವರಿಸಿದ್ದಾರೆ.**

ತುಟಿ ಸೀಳಿ ಬಿಳಿ ಹಿಮದ ಮೇಲೆ ಕಡುಗೆಂಪು ರಕ್ತ ತೊಟ್ಟಿಕ್ಕುವಷ್ಟು ಚಳಿಯಿರುವ ಕಣಿವೆ ರಾಜ್ಯ ಜಮ್ಮು ಮತ್ತು ಕಾಶ್ಮೀರ ಕಳೆದ ಹಲವು ವರ್ಷಗಳಿಂದ ಗುಂಡಿನ ದಾಳಿಗೆ ಎದೆಯರಿದು ಹರಿದ ನೆತ್ತರಿಗೆ, ಅನ್ನ ತಿಂದ ಮನೆಗೆ ಕನ್ನ ಹಾಕುವ ಕೆಲ ಶಕ್ತಿಗಳಿಗೆ, ಹಿಂಸಾಚಾರಕ್ಕೆ, ಗಡಿ ಉದ್ವಿಘ್ನತೆಗೆ ಮತ್ತು ಧರ್ಮದ ಹೆಸರಿನಲ್ಲಿ ಅಧರ್ಮ ತಾಂಡವವಾಡುತ್ತಿದ್ದ ಕಾರಣಕ್ಕೆ ಸುದ್ದಿಯಾಗುತ್ತಿತ್ತು. ಆದರೆ, ಈ ಬಾರಿ ಸುದ್ದಿಯಾಗಿರುವುದು ಗುಂಡಿನ ಸದ್ದಿನಿಂದಲ್ಲ. ಕ್ರಿಕೆಟ್ ಆಟಗಾರರ ಬ್ಯಾಟ್-ಬಾಲ್‌ನ ಸದ್ದಿನಿಂದ. ಇದು ಭಯೋತ್ಪಾದಕರ ಕರಿ ನೆರಳಲ್ಲ. ಬದಲಾಗಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಮಿನುಗುತ್ತಿರುವ ಕ್ರೀಡಾ ಬೆಳಕು.

ಹೌದು, ಇಲ್ಲಿ ಕ್ರೀಡೆ ಮತ್ತೊಮ್ಮೆ ಜೀವ ಪಡೆದಿದೆ. ಕಣಿವೆ ರಾಜ್ಯದ ಕ್ರೀಡೆಯ ಇತಿಹಾಸ ಬಹಳ ದೊಡ್ಡದು. ಆದರೆ ಭಯೋತ್ಪಾದಕದಂತಹ ಶಕ್ತಿಗಳು ಇಲ್ಲಿ ಜೋರಾಗಿ ಲೊಡ ಲೊಡ ಸದ್ದು ಮಾಡುತ್ತಿದ್ದ ಕಾರಣ ಕ್ರೀಡೆಯ ಸೆಲೆ ಬತ್ತಿ ಹೋಗಿತ್ತು. ಆದರೆ ಜಮ್ಮು ಕಾಶ್ಮೀರ ತಂಡ ದೇಶಿ ಟೂರ್ನಿಯಾದ ರಣಜಿ ಟ್ರೋಫಿ ಗೆಲ್ಲುವ ಮೂಲಕ ಬತ್ತಿ ಹೋಗಿದ್ದ ದೀಪದ ಹತ್ತಿ ಮತ್ತೆ ಉರಿಯಲಾರಾಂಭಿಸಿರುವ ಮುನ್ಸೂಚನೆ ನೀಡುತ್ತಿದೆ.

ಕ್ರೀಡೆಯು ಯಾವಾಗಲೂ ಸಮಾಜದ ಕನ್ನಡಿಯಿದ್ದಂತೆ. ಎಲ್ಲಿ ಶಾಂತಿ ಸೌಹಾರ್ದಕ್ಕೆ ಜಾಗ ಇರುತ್ತದೋ ಅಲ್ಲಿ ಕ್ರೀಡೆ ಖಂಡಿತ ನೆಲೆಯೂರುತ್ತದೆ. ಯಾವಾಗ ಇಳಿ ಸಂಜೆಯ ಮೊಬ್ಬು ಕತ್ತಲಿನಂತೆ ಅಶಾಂತಿ ಆವರಿಸುತ್ತೋ ಅಂತಹ ಜಾಗಗಳಲ್ಲಿ ಕ್ರೀಡೆ ಸದ್ದಿಲ್ಲದೇ ಎದ್ದು ಓಡುತ್ತದೆ. ಕಾಶ್ಮೀರದಲ್ಲಿ ಉಂಟಾಗಿದ್ದ ದೀರ್ಘಕಾಲದ ಅಶಾಂತಿ ಕ್ರೀಡಾಂಗಣಗಳನ್ನು ಖಾಲಿ ಮಾಡಿಸಿತ್ತು. ಪ್ರತಿಭೆಗಳು ಹುಟ್ಟಿದರೂ, ಬೆಳೆಸುವ ನೆಲೆ ಇರಲಿಲ್ಲ. ಮಕ್ಕಳು ಬ್ಯಾಟ್ ಹಿಡಿಯುವುದಕ್ಕಿಂತ ಭಯೋತ್ಪಾದಕದಂತಹ ದಾರಿ ಹಿಡಿಯುತ್ತಿದ್ದದ್ದೇ ಹೆಚ್ಚು. ಇಂತಹ ಸನ್ನಿವೇಶದಲ್ಲಿ ಕಣಿವೆ ತಂಡ ರಣಜಿ ಟ್ರೋಫಿ ಫೈನಲ್ ಪಂದ್ಯ ಗೆದ್ದು ಚಾಂಪಿಯನ್ ಆಗಿ ಹೊರ ಹೊಮ್ಮಿರುವುದು ಕೇವಲ ಕ್ರೀಡಾ ಸಾಧನೆ ಮಾತ್ರವಲ್ಲ. ಅಲ್ಲಿ ಸೌಹಾರ್ದತೆ ಮನೆ ಮಾಡುವ ಮುನ್ಸೂಚನೆ ಕಾಣುತ್ತಿದೆ.

ಭಾರತೀಯ ದೇಶೀಯ ಕ್ರಿಕೆಟ್‌ನ ಅತ್ಯಂತ ಪ್ರತಿಷ್ಠಿತ ಟೂರ್ನಿಯಾದ ರಣಜಿ ಟ್ರೋಫಿಯ ಗರಿಯನ್ನು ಮುಡಿಗೇರಿಸಿಕೊಳ್ಳುವುದು ಯಾವುದೇ ರಾಜ್ಯದ ಕನಸು. ದಶಕಗಳಿಂದ ಕ್ರಿಕೆಟ್ ಸಂಸ್ಕೃತಿ ಗಟ್ಟಿಯಾಗಿ ನೆಲೆಗೊಂಡಿರುವ ಮಹಾರಾಷ್ಟ್ರ, ಮುಂಬೈ, ಕರ್ನಾಟಕ, ತಮಿಳುನಾಡುಗಳಂತಹ ಬಲಿಷ್ಠ ಕ್ರಿಕೆಟ್ ತಂಡಗಳ ನಡುವೆ ಕಾಶ್ಮೀರ ಚಾಂಪಿಯನ್ ಆಗಿರುವುದು ಸಣ್ಣ ವಿಚಾರವಲ್ಲ.

ಅಲ್ಲಿರುವ ವಿಶಾಲ ಕಣಿವೆಗಳು ಯುವಕರಿಗೆ ನಿಮ್ಮ ಭವಿಷ್ಯ ಬಂದೂಕಿನಿಂದ ನುಸುಳುವ ಗುಂಡುಗಳಲ್ಲಿಲ್ಲ. ಬದಲಾಗಿ ಇಲ್ಲಿನ ಮರಗಳಿಂದ ತಯಾರಾಗುವ ಕ್ರಿಕೆಟ್ ಬ್ಯಾಟ್‌ಗಳಲ್ಲಿದೆ ಎಂಬ ಸಂದೇಶವನ್ನು ರವಾನಿಸಿದಂತಿವೆ. ಇನ್ನು ಮುಂದೆ ಸುದ್ದಿ ವಾಹಿನಿಗಳು ಹಿಂಸಾಚಾರ, ಭಯೋತ್ಪಾದನೆ ಹಾಗೂ ಗುಂಡಿನ ದಾಳಿಯ ಕುರಿತ ಚರ್ಚೆಗೆ ಸೀಮಿತವಾಗದೆ ಕ್ರೀಡಾ ವಿಶ್ಲೇಷಣೆ, ಅಮೋಘ ಸೆಂಚುರಿ, ಉತ್ತಮ ಬೌಲಿಂಗ್, ಅದ್ಭುತ ಜೊತೆಯಾಟ, ಕ್ರೀಡಾಳುಗಳ ಯಶೋಗಾಥೆಯ ಕುರಿತು ಸುದ್ದಿ ಪ್ರಸಾರ ಮಾಡುವ ಕಾಲ ದೂರವಿಲ್ಲ. ಇಂತಹ ಕೆಲ ಬದಲಾವಣೆಗಳು ಸೌಹಾರ್ದತೆ ಗಟ್ಟಿಯಾಗಿ ನೆಲೆಯೂರಲು ಬಹುಮುಖ್ಯ ಪಾತ್ರ ವಹಿಸುತ್ತವೆ.

ಶ್ರೀಲಂಕಾದಲ್ಲಿ ದಶಕಗಳ ಕಾಲ ಹಿಂಸಾಚಾರ ಮತ್ತು ಭಿನ್ನಾಭಿಪ್ರಾಯಗಳಿಗೆ ಸುದ್ದಿಯಾಗುತ್ತಿದ್ದ ಸಿಂಹಳ ಮತ್ತು ತಮಿಳು ಸಮುದಾಯಗಳು ಸದಾ ಪರಸ್ಪರ ಕೆಸರೆರೆಚಾಟ ಮಾಡಿಕೊಳ್ಳುತ್ತಿದ್ದವು. ಒಂದು ಸಮುದಾಯವನ್ನು ಕಂಡರೆ ಇನ್ನೊಂದು ಸಮುದಾಯಕ್ಕೆ ಸುತರಾಂ ಆಗುತ್ತಿರಲಿಲ್ಲ. ಆ ಬಳಿಕ ಶ್ರೀಲಂಕಾದಲ್ಲಿ ಕ್ರಿಕೆಟ್ ಸಂಸ್ಕೃತಿ ದಟ್ಟವಾಗಿ ಬೆಳೆಯಿತು. ಆ ವೇಳೆ ಉಭಯ ಸಮುದಾಯಗಳ ಆಟಗಾರರು ಒಂದೇ ತಂಡದಲ್ಲಿ ಆಡುವ ಮೂಲಕ ಅವರಲ್ಲಿ ಒಂದೊಳ್ಳೆ ಬಾಂಧವ್ಯ ಬೆಳೆಯಿತು. ಈ ಮೂಲಕ ಶ್ರೀಲಂಕಾ 1996 ವಿಶ್ವಕಪ್ ಗೆದ್ದು ತನ್ನ ರಾಷ್ಟದ ಏಕತೆಯ ಭಾವನೆಗೆ ಪುಷ್ಟಿ ನೀಡಿತು. ಹೀಗೆ ಕ್ರೀಡೆಗೆ ಎಂತಹ ಹಾವು ಮುಂಗುಸಿಗಳನ್ನು ಕೂಡ ಒಂದು ಮಾಡಿಸುವ ತಾಕತ್ತಿದೆ.

ಇನ್ನೊಂದು ಇದೇ ರೀತಿಯ ಉದಾಹರಣೆ ನೋಡುವುದಾದರೆ, ಐರ್ಲೆಂಡ್‌ನಲ್ಲಿ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್ ಸಮುದಾಯಗಳ ತಿಕ್ಕಾಟ ಮತ್ತು ಸಂಘರ್ಷದಿಂದ ಕೆಲ ವರ್ಷಗಳ ಕಾಲ ಅಲ್ಲಿ ಮಳೆಗಾಲದಲ್ಲಿ ಕೆಡಕು ಸಂಭವಿಸುವ ಮುನ್ಸೂಚನೆಯಾಗಿ ಬೀಸುವ ಕೆಟ್ಟ ತಂಗಾಳಿಯಂತಹ ಅಶಾಂತಿಯ ಗಾಳಿ ಬೀಸಿತ್ತು. ಆದರೆ ಅಲ್ಲಿ ಫುಟ್ಬಾಲ್ ಕ್ರೀಡೆ ಎರಡೂ ಸಮುದಾಯಗಳ ನಡುವೆ ಸೌಹಾರ್ದತೆ ಹುಟ್ಟಿಕೊಳ್ಳಲು ವೇದಿಕೆಯಾಯಿತು. ಕಡೆಗೆ ರಾಷ್ಟ್ರೀಯ ತಂಡಕ್ಕೆ ಬೆಂಬಲ ನೀಡುವ ಉದ್ದೇಶದಿಂದ ಎರಡೂ ಸಮುದಾಯಗಳು ಒಟ್ಟಾದವು. ಹೀಗೆ ಕ್ರೀಡೆಗೆ ಒಂದು ಅಗಾಧ ಶಕ್ತಿ ಇದೆ. ಆ ಶಕ್ತಿ ಇದೀಗ ಜಮ್ಮುವಿನಲ್ಲಿ ಮನೆ ಮಾಡುತ್ತಿರುವುದು ಸಂತಸದ ವಿಚಾರ.

ಹೇಗೆ ಮಹಾಭಾರತದಲ್ಲಿರುವಂತೆ ಕುರುಕ್ಷೇತ್ರದ ರಾಣಾಂಗಣದಲ್ಲಿ ಅರ್ಜುನ ಗಾಂಡೀವವನ್ನು ಕೆಳಗಿಳಿಸುತ್ತಿದ್ದಂತೆ ಯುದ್ಧದ ದಿಕ್ಕು ಬದಲಾಯಿತು. ಇತ್ತ ಶ್ರೀ ಕೃಷ್ಣ ಪರಮಾತ್ಮ ಗೀತೋಪದೇಶ ನೀಡಿದ ಬಳಿಕ ನಿಜವಾದ ಯುದ್ಧ ಪ್ರಾರಂಭವಾಯಿತು. ಇನ್ನೂ, ರಾಮಾಯಣದಲ್ಲಿ ವನವಾಸಕ್ಕೆಂದು ಅರಣ್ಯದ ಜಾಡು ಹಿಡಿದು ಕಾನನ ಹೊಕ್ಕ ಶ್ರೀರಾಮ ನ್ಯಾಯ, ನೀತಿ, ಸತ್ಯ ಮತ್ತು ಧರ್ಮದ ದೀಪವನ್ನು ಪ್ರಕಾಶಮಾನವಾಗಿ ಬೆಳಗಿಸಿದನೋ ಹಾಗೆ ಜಮ್ಮುವಿನಲ್ಲಿ ನಿರಂತರವಾಗಿ ತಾಂಡವವಾಡುತ್ತಿದ್ದ ಭಯೋತ್ಪಾದಕ ಕೃತ್ಯಗಳಿಗೆ ಅಲ್ಲಿನ ಕ್ರೀಡೆಯ ಸದ್ದು ಸೌಹಾರ್ದತೆಯ ಗೀತೆ ಹಾಡಿ ತೆರೆ ಎಳೆದಂತೆ ಕಾಣುತ್ತಿದೆ. ರಣರಂಗವಾಗಿದ್ದ ನೆಲದಲ್ಲಿ ಇನ್ನು ಮುಂದೆ ಕ್ರೀಡೆ ಅರಳುತ್ತದೆ. ಗುಂಡು ಸ್ಫೋಟಗೊಂಡ ಸದ್ದಿನ ಬದಲು ಕ್ರೀಡಾಭಿಮಾನಿಗಳ ಕೇಕೆ, ಶಿಳ್ಳೆಗಳು ಮೊಳಗುವ ಭರವಸೆ ಇದೆ.

ಹೇಗೆ ಸೂಜಿ-ದಾರ ಜೊತೆಯಾಗಿ ಹರಿದು ಚಿಂದಿಯಾದ ಬಟ್ಟೆಗಳನ್ನು ಹೊಲಿದು ತೇಪೆ ಹಚ್ಚಿ ಒಂದು ಮಾಡುತ್ತೋ ಹಾಗೆ ಕ್ರೀಡೆ ಸಮಾಜವನ್ನು ಜೋಡಿಸಿ ಸೌಹಾರ್ದತೆಯ ಭಾವ ಮೂಡಿಸುತ್ತೆ. ಕಾಶ್ಮೀರದ ಕ್ರಿಕೆಟ್ ತಂಡ ರಣಜಿ ಟ್ರೋಫಿ ಗೆದ್ದಿರುವುದು ಒಂದು ಅಧ್ಯಾಯದ ಆರಂಭ. ಆದರೆ ಈ ಸುಂದರ ಅಧ್ಯಾಯವನ್ನು ಪಾಲನೆ ಮತ್ತು ಪೋಷಣೆ ಮಾಡುವ ಸವಾಲು ನಮ್ಮೆದುರಿಗಿದೆ. ಕ್ರೀಡೆಗೆ ಅಗತ್ಯವಿರುವ ಮೂಲ ಸೌಕರ್ಯ, ನಿರಂತರ ತರಬೇತಿ ಹಾಗೂ ಅಲ್ಲಿನ ಕ್ರಿಕೆಟ್ ಸಂಸ್ಕೃತಿಗೆ ಅಗತ್ಯವಿರುವ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದು ಭಾರತೀಯ ಕ್ರಿಕೆಟ್ ಮಂಡಳಿಯ ಕೆಲಸ. ಅಲ್ಲಿ ಕ್ರಿಕೆಟ್ ಸಂಸ್ಕೃತಿಯನ್ನು ನೆಲೆ ನಿಲ್ಲಿಸಲು ಶ್ರಮಿಸಿದರೆ ಶಾಂತಿ ತಾನಾಗಿಯೇ ಅಲ್ಲಿ ಮನೆ ಮಾಡುತ್ತದೆ.

**ಕಣಿವೆ ರಾಜ್ಯದ ಕ್ರೀಡಾ ಹಿನ್ನೆಲೆ:** ದೇಶದ ಎಲ್ಲಾ ರಾಜ್ಯಗಳಂತೆಯೇ ಕಾಶ್ಮೀರದಲ್ಲಿ ಕ್ರಿಕೆಟ್‌ಗೆ ಬಹಳ ಹಿಂದಿನಿಂದಲೂ ಮನ್ನಣೆ ಇದೆ. 1950-1960ರ ದಶಕಗಳಲ್ಲಿಯೇ ಕ್ರಿಕೆಟ್ ಇಲ್ಲಿ ಬಹಳಷ್ಟು ಜನಪ್ರಿಯತೆ ಪಡೆದುಕೊಂಡಿತ್ತು. ಆಗಿನಿಂದಲೂ ಕಣಿವೆ ರಾಜ್ಯ ರಣಜಿ ಟ್ರೋಫಿಯಲ್ಲಿ ಸ್ಪರ್ಧಿಸುತ್ತಿದೆ. ಸ್ಪರ್ಧಿಸಿದರೂ, ಗುಂಪು ಹಂತದಲ್ಲಿಯೇ ಸೋತು ಟೂರ್ನಿಯಿಂದ ಹೊರ ಬೀಳುತ್ತಿತ್ತು. ಆದರೆ 2014-15ರ ಆವೃತ್ತಿಯಲ್ಲಿ ಕಾಶ್ಮೀರ ತಂಡ ರಣಜಿ ಟ್ರೋಫಿಯಲ್ಲಿ ಅದ್ಭುತ ಪ್ರದರ್ಶನ ನೀಡಿತ್ತು. ಕ್ರಿಕೆಟ್ ಮಾತ್ರವಲ್ಲ, ಇಲ್ಲಿ ಫುಟ್ ಬಾಲ್ ಕೂಡ ಅಷ್ಟೇ ದಟ್ಟವಾಗಿ ಬೆಳೆದಿತ್ತು. ಹಿಮದ ಅಂಚಿನಲ್ಲಿರುವ ಇಲ್ಲಿ ವಿಂಟರ್ ಸೀಸನ್ ಕ್ರೀಡೆಗಳಿಗೂ ಮಹತ್ವದ ಸ್ಥಾನವಿದೆ. ಆದರೆ ಭಯೋತ್ಪಾದನೆಯಂತಹ ಕೃತ್ಯಗಳು ಸಂಭವಿಸಿದ ಕಾರಣ ಸಂಪೂರ್ಣವಾಗಿ ಅಲ್ಲದಿದ್ದರೂ ಅಲ್ಲಿನ ಬಹುತೇಕ ಕ್ರೀಡೆಗಳು ಮಕಾಡೆ ಮಲಗಿದ್ದವು. ಇಂತಹ ಸಂಕಷ್ಟದಲ್ಲೂ ಅಲ್ಲಿನ ಕ್ರೀಡಾಳುಗಳು ಅಭ್ಯಾಸ ಬಿಡಲಿಲ್ಲ. ಅದರ ಪ್ರತಿಫಲವಾಗಿ ಇಂದು ಕ್ರೀಡೆ ಜಮ್ಮುವಿನಲ್ಲಿ ಮತ್ತೆ ಉಸಿರಾಡುತ್ತಿದೆ.

**- ಕೆ ಎನ್ ರಂಗನಾಥ್,** ಚಿತ್ರದುರ್ಗ




### ಇಲ್ಲಿ ಕ್ರೀಡೆ ಮತ್ತೆ ಜೀವ ಪಡೆದಿದೆ....

- ಕಣಿವೆ ರಾಜ್ಯದ ಕ್ರೀಡೆಯ ಇತಿಹಾಸ ಬಹಳ ದೊಡ್ಡದು.
- ಭಯೋತ್ಪಾದಕದಂತಹ ಶಕ್ತಿಗಳು ಇಲ್ಲಿ ಜೋರಾಗಿ ಲೊಡ ಲೊಡ ಸದ್ದು ಮಾಡುತ್ತಿದ್ದ ಕಾರಣ ಕ್ರೀಡೆಯ ಸೆಲೆ ಬತ್ತಿ ಹೋಗಿತ್ತು.
- ಜಮ್ಮು ಕಾಶ್ಮೀರ ತಂಡ ದೇಶಿ ಟೂರ್ನಿಯಾದ ರಣಜಿ ಟ್ರೋಫಿ ಗೆಲ್ಲುವ ಮೂಲಕ ಬತ್ತಿ ಹೋಗಿದ್ದ ದೀಪದ ಹತ್ತಿ ಮತ್ತೆ ಉರಿಯಲಾರಾಂಭಿಸಿರುವ ಮುನ್ಸೂಚನೆ ನೀಡುತ್ತಿದೆ.
- ಕ್ರೀಡೆಯು ಯಾವಾಗಲೂ ಸಮಾಜದ ಕನ್ನಡಿಯಿದ್ದಂತೆ.
- ಎಲ್ಲಿ ಶಾಂತಿ ಸೌಹಾರ್ದಕ್ಕೆ ಜಾಗ ಇರುತ್ತದೋ ಅಲ್ಲಿ ಕ್ರೀಡೆ ಖಂಡಿತ ನೆಲೆಯೂರುತ್ತದೆ.
- ಯಾವಾಗ ಇಳಿ ಸಂಜೆಯ ಮೊಬ್ಬು ಕತ್ತಲಿನಂತೆ ಅಶಾಂತಿ ಆವರಿಸುತ್ತೋ ಅಂತಹ ಜಾಗಗಳಲ್ಲಿ ಕ್ರೀಡೆ ಸದ್ದಿಲ್ಲದೇ ಎದ್ದು ಓಡುತ್ತದೆ.
- ಕಾಶ್ಮೀರದಲ್ಲಿ ಉಂಟಾಗಿದ್ದ ದೀರ್ಘಕಾಲದ ಅಶಾಂತಿ ಕ್ರೀಡಾಂಗಣಗಳನ್ನು ಖಾಲಿ ಮಾಡಿಸಿತ್ತು.
- ಪ್ರತಿಭೆಗಳು ಹುಟ್ಟಿದರೂ, ಬೆಳೆಸುವ ನೆಲೆ ಇರಲಿಲ್ಲ. ಮಕ್ಕಳು ಬ್ಯಾಟ್ ಹಿಡಿಯುವುದಕ್ಕಿಂತ ಭಯೋತ್ಪಾದಕದಂತಹ ದಾರಿ ಹಿಡಿಯುತ್ತಿದ್ದದ್ದೇ ಹೆಚ್ಚು.
- ಇಂತಹ ಸನ್ನಿವೇಶದಲ್ಲಿ ಕಣಿವೆ ತಂಡ ರಣಜಿ ಟ್ರೋಫಿ ಫೈನಲ್ ಪಂದ್ಯ ಗೆದ್ದು ಚಾಂಪಿಯನ್ ಆಗಿ ಹೊರ ಹೊಮ್ಮಿರುವುದು ಕೇವಲ ಕ್ರೀಡಾ ಸಾಧನೆ ಮಾತ್ರವಲ್ಲ.
- ಅಲ್ಲಿ ಸೌಹಾರ್ದತೆ ಮನೆ ಮಾಡುವ ಮುನ್ಸೂಚನೆ ಕಾಣುತ್ತಿದೆ.
- ಭಾರತೀಯ ದೇಶೀಯ ಕ್ರಿಕೆಟ್‌ನ ಅತ್ಯಂತ ಪ್ರತಿಷ್ಠಿತ ಟೂರ್ನಿಯಾದ ರಣಜಿ ಟ್ರೋಫಿಯ ಗರಿಯನ್ನು ಮುಡಿಗೇರಿಸಿಕೊಳ್ಳುವುದು ಯಾವುದೇ ರಾಜ್ಯದ ಕನಸು.
- ದಶಕಗಳಿಂದ ಕ್ರಿಕೆಟ್ ಸಂಸ್ಕೃತಿ ಗಟ್ಟಿಯಾಗಿ ನೆಲೆಗೊಂಡಿರುವ ಮಹಾರಾಷ್ಟ್ರ, ಮುಂಬೈ, ಕರ್ನಾಟಕ, ತಮಿಳುನಾಡುಗಳಂತಹ ಬಲಿಷ್ಠ ಕ್ರಿಕೆಟ್ ತಂಡಗಳ ನಡುವೆ ಕಾಶ್ಮೀರ ಚಾಂಪಿಯನ್ ಆಗಿರುವುದು ಸಣ್ಣ ವಿಚಾರವಲ್ಲ.

---

> ಮಂತ್ರೋಚ್ಚಾರಣೆಯ ಬಳಿಕ ನಿನಗೊಂದು ರೀತಿಯ ಆಹ್ಲಾದತೆ ಮತ್ತು ಪರವಶತೆ ಅನುಭವಕ್ಕೆ ಬರುತ್ತವೆ. ಇದು ನಿನ್ನ ಮನಸ್ಸನ್ನು ನಿರಾಳವಾಗಿಸಿ, ಒಂದು ಅದ್ಭುತ ಶಮನಕಾರಿಯಂತೆ ಕೆಲಸ ಮಾಡುತ್ತದೆ. ನಿನ್ನ ಮನಸು ಉದ್ವೇಗಗೊಂಡಿದ್ದಾಗ, ಮಂತ್ರಪಠಣವು ಚಿತ್ತವನ್ನು ಬೇರೆಡೆಗೆ ಹರಿಸಿ, ಸಮಸ್ಯೆಯನ್ನು ತಣ್ಣಗಿನ ಮನಸ್ಸಿನಿಂದ ಅವಲೋಕಿಸಿ ಸರಿಯಾದ ನಿರ್ಧಾರ ತೆಗೆದು ಕೊಳ್ಳಲು ನೆರವಾಗುತ್ತದೆ

# ಆತ್ಮವಿಶ್ವಾಸವನ್ನು ಹೆಚ್ಚಿಸುವ ಮಂತ್ರವೆಂಬ ಮನದ ರಕ್ಷಾಕವಚ

ಒಂದೊಳ್ಳೆ ಮಾತು

ಒಬ್ಬ ಯುವ ಶಿಷ್ಯ, ಮಾನಸಿಕ ಒತ್ತಡ ಮತ್ತು ಉದ್ವೇಗದಿಂದ ಬಳಲುತ್ತಿದ್ದನು. ಅವನಿಗೆ ಕಲಿಯುವಿಕೆಯಲ್ಲಿ ಏಕಾಗ್ರತೆ ಸಿದ್ಧಿಸುತ್ತಿರಲಿಲ್ಲ, ಸಣ್ಣ ಪುಟ್ಟ ಸೋಲುಗಳಿಗೂ ಖಿನ್ನತೆ ಮೂಡುತ್ತಿತ್ತು. ಇದರಿಂದ ದೈಹಿಕವಾಗಿಯೂ ಆತ ಬಳಲಿದ್ದನು. ಈ ಎಲ್ಲ ಸಂಕಷ್ಟಗಳಿಗೆ ಪರಿಹಾರ ಹುಡುಕುತ್ತಾ ತನ್ನ ಆಶ್ರಮದ ಗುರುಗಳ ಬಳಿ ಬಂದು ಅಳಲು ತೋಡಿಕೊಂಡ.

ಗುರುಗಳೇ, ನನಗೆ ಏಕಾಗ್ರತೆಯೇ ಇಲ್ಲ, ಸದಾ ಆತಂಕ. ನನ್ನ ಶರೀರದ ತೇಜಸ್ಸೇ ಮಾಸಿ ಹೋಗಿದೆ. ನೀವು ಮಂತ್ರ ಜಪಿಸಲು ಹೇಳುತ್ತೀರಿ. ಆದರೆ ಕೇವಲ ಶಬ್ದಗಳ ಪಠಣದಿಂದ ಇಷ್ಟೆ ಸಮಸ್ಯೆಗಳು ಹೇಗೆ ಬಗೆಹರಿಯುತ್ತವೆ? ಎಂದು ಕೇಳಿದ.

ಗುರುಗಳು ನಸುನಕ್ಕು, ಅವನಿಗೆ ಒಂದು ಲೋಟದಲ್ಲಿ ನೀರನ್ನು ತರಲು ಹೇಳಿದರು. ನಂತರ ಆ ನೀರಿಗೆ ಸ್ವಲ್ಪ ಉಪ್ಪನ್ನು ಬೆರೆಸಿ, ಈಗ ಇದನ್ನು ಕುಡಿ ಎಂದರು. ಶಿಷ್ಯ ಕುಡಿದು ಮುಖ ಸಿಂಡರಿಸಿದ. ಗುರುಗಳು ಹೇಳಿದರು, ನೋಡು, ನೀರಿನಲ್ಲಿ ಕರಗಿದ ಉಪ್ಪು ಕಣ್ಣಿಗೆ ಕಾಣುತ್ತಿಲ್ಲ, ಆದರೆ ಅದರ ಪ್ರಭಾವ ನೀರಿನ ರುಚಿಯ ಮೇಲೆ ಆಗಿದೆ. ಹಾಗೆಯೇ ಮಂತ್ರದ ಶಬ್ದಗಳು ಕಣ್ಣಿಗೆ ಕಾಣದಿದ್ದರೂ, ಅದರ ಧ್ವನಿ, ಶ್ವಾಸ ಮತ್ತು ಲಯಬದ್ಧವಾದ ಕಂಪನಗಳು ನಮ್ಮ ದೇಹದ ಚೈತನ್ಯ ಮತ್ತು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುವ ಶಕ್ತಿಯ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ.

ಶಿಷ್ಯನ ಆಸಕ್ತಿ ಹೆಚ್ಚಿತು. ಗುರುಗಳು ವಿವರಿಸಲು ಶುರುಮಾಡಿದರು: ನೋಡು, ಪ್ರತಿ ಸ್ತೋತ್ರ, ಮಂತ್ರದ ಉಚ್ಚಾರವೂ ಕೇವಲ ಪದಗಳಲ್ಲ, ಇದನ್ನು ಪಠಿಸಲು ನಾಲಿಗೆಗೆ ಹೆಚ್ಚಿನ ಒತ್ತಡ ನೀಡಬೇಕಾಗುತ್ತದೆ.

ಇದು ಧ್ವನಿಪೆಟ್ಟಿಗೆ, ತುಟಿಗಳು ಮತ್ತು ಧ್ವನಿ ಹೊರಡಿಸುವ ಅಂಗಗಳನ್ನು ಸಕ್ರಿಯ ಗೊಳಿಸುತ್ತದೆ. ಈ ಕ್ರಿಯೆಯಿಂದ ಉಂಟಾಗುವ ಕಂಪನವು ಮಿದುಳಿನ ಅಧೋಮಸ್ತಿಷ್ಕ ಗ್ರಂಥಿಯನ್ನು ಪ್ರಚೋದಿಸುತ್ತದೆ. ಈ ಗ್ರಂಥಿಯಿಂದ ಬಿಡುಗಡೆಯಾಗುವ ಅಂತಃಸ್ರಾವಗಳು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ, ಮನಸ್ಸನ್ನು ಸಂತೋಷದಿಂದ ಇಡುತ್ತವೆ.

ಆದ್ದರಿಂದಲೇ ಮಂತ್ರೋಚ್ಚಾರಣೆಯ ಬಳಿಕ ನಿನಗೊಂದು ರೀತಿಯ ಆಹ್ಲಾದತೆ ಮತ್ತು ಪರವಶತೆ ಅನುಭವಕ್ಕೆ ಬರುತ್ತವೆ. ಇದು ನಿನ್ನ ಮನಸ್ಸನ್ನು ನಿರಾಳವಾಗಿಸಿ, ಒಂದು ಅದ್ಭುತ ಶಮನಕಾರಿಯಂತೆ ಕೆಲಸ ಮಾಡುತ್ತದೆ. ನಿನ್ನ ಮನಸ್ಸು ಉದ್ವೇಗಗೊಂಡಿದ್ದಾಗ, ಮಂತ್ರಪಠಣವು ಚಿತ್ತವನ್ನು ಬೇರೆಡೆಗೆ ಹರಿಸಿ, ಸಮಸ್ಯೆಯನ್ನು ತಣ್ಣಗಿನ ಮನಸ್ಸಿನಿಂದ ಅವಲೋಕಿಸಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ನೆರವಾಗುತ್ತದೆ.

ಶಿಷ್ಯ ಎಲ್ಲವನ್ನೂ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದ. ಇದೇ ಸಮಯವೆಂದು ಗುರುಗಳು ಮುಂದುವರಿಸುತ್ತಾ, ನಮ್ಮ ದೇಹದಲ್ಲಿರುವ, ಚಕ್ರಗಳೆಂದು ಕರೆಯಲ್ಪಡುವ ಶಕ್ತಿಕೇಂದ್ರಗಳನ್ನು ಸಮತೋಲನದಲ್ಲಿರಿಸಲು ಮಂತ್ರಗಳು ಸಹಕಾರಿ. ಶಕ್ತಿಯ ಏರು ಪೇರಾದಾಗ ದೇಹದಲ್ಲಿ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ.

ಮಂತ್ರಪಠಣ ಈ ಶಕ್ತಿಗಳನ್ನು ಮೊದಲಿನ ಸ್ಥಿತಿಗೆ ತಂದು, ಹೃದಯದ ಕ್ಷಮತೆ ಹೆಚ್ಚಿಸಿ, ಮಿದುಳನ್ನು ನಿರಾಳವಾಗಿಸುತ್ತದೆ. ಉಸಿರಾಟವನ್ನು ಸರಾಗಗೊಳಿಸುತ್ತದೆ. ಇದು ನಿನ್ನ ಕಲಿಯುವಿಕೆಯನ್ನು ಸಹ ಸುಲಭವಾಗಿಸುತ್ತದೆ, ಏಕಾಗ್ರತೆಯನ್ನು ಹೆಚ್ಚಿಸುತ್ತದೆ.

ಬದುಕಿನ ಸೋಲಿನಿಂದ ಉಂಟಾದ ಖಿನ್ನತೆ ಮತ್ತು ನಿರುತ್ಸಾಹವನ್ನು ಹೋಗಲಾಡಿಸಲು ಮಿದುಳಿಗೆ ಸಕಾರಾತ್ಮಕ ಭಾವನೆ ಮೂಡಿಸುವ ಕಂಪನಗಳು ಬಿಡುಗಡೆಯಾಗುತ್ತವೆ. ನಿನ್ನ ಮೊಗದಲ್ಲಿ ರಕ್ತಪರಿ ಚಲನೆ ಹೆಚ್ಚಿ, ವಿಷಕಾರಿ ವಸ್ತುಗಳು ನಿವಾರಣೆಯಾಗಿ, ಹೊಸರಕ್ತ ತುಂಬಿಕೊಳ್ಳುವುದರಿಂದ ತೇಜಸ್ಸು ಸಹ ಹೆಚ್ಚುತ್ತದೆ ಎಂದರು. ಶಿಷ್ಯನಿಗೆ ಅರಿವಾಯಿತು- ಮಂತ್ರ ಕೇವಲ ಶಬ್ದವಲ್ಲ, ಅದು ದೇಹ ಮತ್ತು ಮನಸ್ಸನ್ನು ಬೆಸೆಯುವ ಮಹತ್ವದ ವಿಜ್ಞಾನ ಎಂದು.

ಮನನಾತ್ ತ್ರಾಯತೇ ಇತಿ ಮಂತ್ರಃ ಅಂದರೆ, ಮನಸ್ಸಿನಿಂದ ಪದೇ ಪದೆ ನೆನೆಯುತ್ತಾ, ಜಪಿಸುವುದರಿಂದ ಯಾವುದು ನಮಗೆ ರಕ್ಷಣೆ ಕೊಡುತ್ತದೆಯೋ ಅದೇ ಮಂತ್ರ ಎಂದು ಹೇಳಿದ ಗುರುಗಳು ಕಣ್ಣು ಮುಚ್ಚಿ ಮತ್ತೆ ಧ್ಯಾನಕ್ಕೆ ಕುಳಿತರು.

ಈಗ ಶಿಷ್ಯನ ಅನುಮಾನ-ಆತಂಕಗಳೆಲ್ಲವೂ ನಿವಾರಣೆಯಾಗಿ ಗುರುಗಳು ಹೇಳಿದ ಮಂತ್ರವನ್ನು ಪಠಿಸಲು ಅವನು ಕೂಡ ಧ್ಯಾನಸ್ಥನಾಗಿ ಏಕಾಗ್ರತೆಯಿಂದ ಕುಳಿತನು. ಅತಿಯಾದ ಒತ್ತಡದ ಈ ಜೀವನದಲ್ಲಿ, ದಿನಕ್ಕೆ ಹತ್ತು ನಿಮಿಷಗಳ ಕಾಲ ಯಾವುದಾದರೊಂದು ಮಂತ್ರ ಅಥವಾ ಸ್ತೋತ್ರವನ್ನು ಏಕಾಗ್ರತೆಯಿಂದ ಪಠಿಸಿ ನೋಡಿ. ಅದು ನಿಮ್ಮ ಮಿದುಳಿಗೆ ವಿಶ್ರಾಂತಿ ನೀಡುವುದಲ್ಲದೆ, ಆತ್ಮವಿಶ್ವಾಸವನ್ನು ಹೆಚ್ಚಿಸಿ ಬದುಕಿನ ಸೋಲುಗಳನ್ನು ಎದುರಿಸುವ ಶಕ್ತಿಯನ್ನು ನೀಡುತ್ತದೆ. ನಮ್ಮ ಸನಾತನ ಧರ್ಮ ಮತ್ತು ಹಿರಿಯರು ನೀಡಿದ ಈ ವರವನ್ನು ಉಪಯೋಗಿಸಿ ಕೊಳ್ಳುವ ಜಾಣ್ಮೆ ನಮಗಿರಬೇಕು.

**- ರೂಪಾ** ಗುರುರಾಜ್



---

**» ಒಂದು ಕಾಲದಲ್ಲಿ ಸಾವಿರಾರು ಸಂಖ್ಯೆಯಲ್ಲಿದ್ದ ಆನೆಗಳ ಕುಲ ಇಂದು ಕೇವಲ ಒಂದೇ ಒಂದು ಆನೆಗೆ ಬಂದು ನಿಂತಿದೆ ಎಂಬುದು ವಿಜ್ಞಾನ ಲೋಕದ ಅಚ್ಚರಿ ಮತ್ತು ನೋವಿನ ಸಂಗತಿ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ನೈಸ್ನಾ ಮತ್ತು ಅದರ ಸುತ್ತಮುತ್ತಲಿನ ದಟ್ಟವಾದ ಅರಣ್ಯಗಳು ಆನೆಗಳ ಪಾಲಿನ ಸ್ವರ್ಗವಾಗಿದ್ದವು.**



# ಇಲ್ಲಿ ಈಗಿರುವುದು ಒಂದೇ ಆನೆ!

ಸಂಪಾದಕರ ಸದ್ಯಶೋಧನೆ

ದಕ್ಷಿಣ ಆಫ್ರಿಕಾದ ಸುಪ್ರಸಿದ್ಧ ಗಾರ್ಡನ್ ರೂಟ್ ಹಾದಿಯಲ್ಲಿ ಸಾಗುವಾಗ ಸಿಗುವ ನೈಸ್ನಾ ಅರಣ್ಯ ಪ್ರದೇಶವು ಪ್ರಕೃತಿ ಸೌಂದರ್ಯಕ್ಕೆ ಮಾತ್ರವಲ್ಲ, ಜಗತ್ತಿನ ಅತ್ಯಂತ ನಿಗೂಢ ಪ್ರಾಣಿಗಳಲ್ಲಿ ಒಂದಾದ ನೈಸ್ನಾ ಆನೆಯ ಕಥೆಗೂ ಪ್ರಸಿದ್ಧಿಯಾಗಿದೆ.

ಒಂದು ಕಾಲದಲ್ಲಿ ಸಾವಿರಾರು ಸಂಖ್ಯೆಯಲ್ಲಿದ್ದ ಆನೆಗಳ ಕುಲ ಇಂದು ಕೇವಲ ಒಂದೇ ಒಂದು ಆನೆಗೆ ಬಂದು ನಿಂತಿದೆ ಎಂಬುದು ವಿಜ್ಞಾನ ಲೋಕದ ಅಚ್ಚರಿ ಮತ್ತು ನೋವಿನ ಸಂಗತಿ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ನೈಸ್ನಾ ಮತ್ತು ಅದರ ಸುತ್ತಮುತ್ತಲಿನ ದಟ್ಟವಾದ ಅರಣ್ಯಗಳು ಆನೆಗಳ ಪಾಲಿನ ಸ್ವರ್ಗವಾಗಿದ್ದವು.

ಇತಿಹಾಸಕಾರರ ಪ್ರಕಾರ, ಈ ಪ್ರದೇಶದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಆನೆಗಳು ಮುಕ್ತವಾಗಿ ಸಂಚರಿಸುತ್ತಿದ್ದವು. ಇವುಗಳು ದಕ್ಷಿಣ ಆಫ್ರಿಕಾದ ಇತರ ಭಾಗಗಳ ಆನೆಗಳಿಗಿಂತ ಸ್ವಲ್ಪ ಭಿನ್ನವಾಗಿದ್ದವು. ದಟ್ಟ ಕಾಡಿನಲ್ಲಿ ಬದುಕಲು ಹೊಂದಿಕೊಂಡಿದ್ದರಿಂದ ಇವುಗಳು ಹೆಚ್ಚು ಬಲಿಷ್ಠವಾಗಿದ್ದವು.

ಆದರೆ, ನಗರೀಕರಣ ಮತ್ತು ಮಾನವನ ದುರಾಸೆ ಇವುಗಳ ಅವನತಿಗೆ ಕಾರಣವಾಯಿತು. ದಂತಕ್ಕಾಗಿ ನಡೆದ ಅತಿಯಾದ ಬೇಟೆ ಮತ್ತು ಕೃಷಿಗಾಗಿ ಅರಣ್ಯ ನಾಶವಾಗಿದ್ದರಿಂದ ಆನೆಗಳ ಸಂಖ್ಯೆ ವೇಗವಾಗಿ ಕ್ಷೀಣಿಸಿತು.

1920ರ ಹೊತ್ತಿಗೆ ಇಲ್ಲಿ 10-15 ಆನೆಗಳು ಮಾತ್ರ ಉಳಿದುಕೊಂಡಿದ್ದವು. ಕಳೆದ ಕೆಲವು ದಶಕಗಳಿಂದ ವಿಜ್ಞಾನಿಗಳು ಮತ್ತು ಪರಿಸರ ಪ್ರೇಮಿಗಳು ನೈಸ್ನಾ ಕಾಡಿನಲ್ಲಿ ಎಷ್ಟು ಆನೆಗಳಿವೆ ಎಂಬ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆ. 2000ನೇ ಇಸವಿಯ ಸುಮಾರಿಗೆ ಅಲ್ಲಿ ಒಂದು ಸಣ್ಣ ಗುಂಪು ಇರಬಹುದು ಎಂದು ಭಾವಿಸಲಾಗಿತ್ತು. ಆದರೆ, ಅತ್ಯಾಧುನಿಕ ಕೆಮರಾ ಟ್ರ್ಯಾಪ್‌ಗಳು ಮತ್ತು ಡಿಎನ್‌ಎ ಪರೀಕ್ಷೆಗಳ ನಂತರ ವಿಜ್ಞಾನಿಗಳು ಒಂದು ಆಘಾತಕಾರಿ ಸತ್ಯವನ್ನು ಹೊರಹಾಕಿದರು.

ಇಡೀ 600 ಚದರ ಕಿ.ಮೀ. ವಿಸ್ತೀರ್ಣದ ದಟ್ಟ ಕಾಡಿನಲ್ಲಿ ಇಂದು ಕೇವಲ ಒಂದೇ ಒಂದು ಹೆಣ್ಣು ಆನೆ ಉಳಿದುಕೊಂಡಿದೆ! ಇದನ್ನು ವಿಜ್ಞಾನಿಗಳು ಪ್ರೀತಿಯಿಂದ ದಿ ಓಲ್ಡ್ ಮ್ಯಾಟ್ರಿ ಯಾರ್ಕ್ ಎಂದು ಕರೆಯುತ್ತಾರೆ. ಆನೆಗಳನ್ನು ದಟ್ಟ ಕಾಡಿನಲ್ಲಿ ನೇರವಾಗಿ ಕಾಣುವುದು ಅಸಾಧ್ಯ. ಆದ್ದರಿಂದ ಸಂಶೋಧಕರು ಸಗಣಿಯನ್ನು ಸಂಗ್ರಹಿಸಿ ಅದರ ಡಿಎನ್‌ಎ ಪರೀಕ್ಷೆ ಮಾಡಿದರು. ಈ ಪರೀಕ್ಷೆಯು ಕಾಡಿನ ಬೇರೆ ಬೇರೆ ಭಾಗಗಳಲ್ಲಿ ಸಿಕ್ಕಿದ ಎಲ್ಲ ಸಗಣೆಗಳೂ ಒಂದೇ ಹೆಣ್ಣು ಆನೆಗೆ ಸೇರಿದ್ದು ಎಂದು ಸಾಬೀತುಪಡಿಸಿತು.

ಅಂದರೆ, ಆ ಒಂಟಿ ಆನೆ ಇಡೀ ಕಾಡಿನ ಉದ್ದಗಲಕ್ಕೂ ಆಹಾರ ಹುಡುಕುತ್ತಾ ಏಕಾಂಗಿಯಾಗಿ ಸಂಚರಿಸುತ್ತಿದೆ. ನೈಸ್ನಾ ಆನೆಯನ್ನು ನೋಡುವುದು ಲಾಟರಿ ಹೊಡೆದಂತೆ. ಇದಕ್ಕೆ ಕಾರಣಗಳು ಹಲವು. ಈ ಆನೆಗೆ ಮನುಷ್ಯರ ವಾಸನೆ ಬಹಳ ಬೇಗ ತಿಳಿಯುತ್ತದೆ. ಮನುಷ್ಯರು ಆ ಕಾಡಿಗೆ ಪ್ರವೇಶಿಸುತ್ತಿದ್ದಂತೆಯೇ ಅದು ದಟ್ಟವಾದ ಪೊದೆಗಳ ನಡುವೆ ಮರೆಯಾಗುತ್ತದೆ.

ಇಷ್ಟು ದೊಡ್ಡ ಪ್ರಾಣಿಯಾಗಿದ್ದರೂ, ಅದು ಕಾಡಿನಲ್ಲಿ ಒಣ ಎಲೆಗಳ ಮೇಲೆ ನಡೆಯುವಾಗಲೂ ಸಣ್ಣ ಶಬ್ದವನ್ನೂ ಮಾಡುವುದಿಲ್ಲ ಎಂದು ಅಲ್ಲಿನ ಅರಣ್ಯ ರಕ್ಷಕರು ಹೇಳುತ್ತಾರೆ. ತನ್ನ ಗುಂಪಿನ ಎಲ್ಲ ಸದಸ್ಯರನ್ನು ಕಳೆದುಕೊಂಡಿರುವ ಈ ಆನೆ, ಮನುಷ್ಯರ ಬಗ್ಗೆ ಅಪಾರ ಅಪನಂಬಿಕೆ ಮತ್ತು ಭಯವನ್ನು ಹೊಂದಿದೆ. ಈ ಹೆಣ್ಣು ಆನೆಗೆ ಈಗ ಸುಮಾರು 45 ರಿಂದ 50 ವರ್ಷ ವಯಸ್ಸು ಎನ್ನಲಾಗಿದೆ.

ಸಾಮಾನ್ಯವಾಗಿ ಆನೆಗಳು ಸಾಮಾಜಿಕ ಪ್ರಾಣಿಗಳು, ಅವುಗಳು ಗುಂಪಿನಲ್ಲಿರಲು ಇಷ್ಟ ಪಡುತ್ತವೆ. ಆದರೆ ಈ ಆನೆ ಕಳೆದ 20 ವರ್ಷಗಳಿಂದ ಏಕಾಂಗಿಯಾಗಿ ಬದುಕುತ್ತಿದೆ. ವಿಜ್ಞಾನಿಗಳ ಪ್ರಕಾರ, ಇದು ತೀವ್ರವಾದ ಮಾನಸಿಕ ಒತ್ತಡದಲ್ಲಿರಬಹುದು. ಏಕೆಂದರೆ ಸಂವಹನ ನಡೆಸಲು ಅಥವಾ ಜತೆಗೂಡಲು ಇದಕ್ಕೆ ತನ್ನ ಜಾತಿಯ ಯಾವುದೇ ಪ್ರಾಣಿ ಅಕ್ಕಪಕ್ಕದಲ್ಲಿಲ್ಲ.


1994ರಲ್ಲಿ ಕ್ರೂಗರ್ ನ್ಯಾಷನಲ್ ಪಾರ್ಕ್‌ನಿಂದ ಮೂರು ಸಣ್ಣ ಆನೆಗಳನ್ನು ಈ ಕಾಡಿಗೆ ಬಿಡಲಾಗಿತ್ತು. ಆದರೆ ಆ ಪ್ರಯತ್ನ ವಿಫಲವಾಯಿತು. ಎರಡು ಆನೆಗಳು ಸಾವನ್ನಪ್ಪಿದವು ಮತ್ತು ಉಳಿದ ಒಂದು ಆನೆಯನ್ನು ವಾಪಸ್ ಕರೆದೊಯ್ಯಲಾಯಿತು. ನೈಸ್ನಾ ಕಾಡಿನ ಹವಾಮಾನ ಮತ್ತು ಅಲ್ಲಿನ ಸಸ್ಯವರ್ಗವು ಇತರ ಭಾಗಗಳ ಆನೆಗಳಿಗೆ ಒಗ್ಗಿಕೊಳ್ಳುವುದು ಕಷ್ಟ ಎಂಬುದು ಅರಿವಾಯಿತು.

ಈಗ ಉಳಿದಿರುವ ಏಕೈಕ ಆನೆ ಸತ್ತರೆ, ನೈಸ್ನಾ ಆನೆಗಳ ಇತಿಹಾಸ ಶಾಶ್ವತವಾಗಿ ಅಂತ್ಯಗೊಳ್ಳುತ್ತದೆ. ಇದು ಪರಿಸರ ಪ್ರೇಮಿಗಳಿಗೆ ದೊಡ್ಡ ಕಳವಳದ ವಿಷಯವಾಗಿದೆ. ಗಾರ್ಡನ್ ರೂಟ್‌ನಲ್ಲಿ ಪ್ರಯಾಣಿಸುವ ಪ್ರವಾಸಿಗರು ನೈಸ್ನಾ ಎಲಿಫೆಂಟ್ ಪಾರ್ಕ್‌ಗೆ (ಇದು ಸಂರಕ್ಷಿತ ಪ್ರದೇಶ, ಇಲ್ಲಿ ಪಳಗಿಸಿದ ಆನೆಗಳಿವೆ) ಭೇಟಿ ನೀಡುತ್ತಾರೆ. ಆದರೆ ನೈಜ ಕಾಡು ಆನೆಯನ್ನು ನೋಡುವ ಆಸೆ ಎಲ್ಲರಿಗೂ ಇರುತ್ತದೆ.

ರಸ್ತೆಯಲ್ಲಿ ಹೋಗುವಾಗ ಆನೆಯ ಹೆಜ್ಜೆ ಗುರುತುಗಳು ಅಥವಾ ಮುರಿದ ಕೊಂಬೆಗಳನ್ನು ಕಂಡರೆ, ಅದು ಆ ಒಂಟಿ ರಾಣಿಯದ್ದೇ ಇರಬಹುದು ಎಂದು ಜನ ಸಂಭ್ರಮಿಸುತ್ತಾರೆ.

**- ವಿಶ್ವೇಶ್ವರ** ಭಟ್

---



## ಇಗೋ ಬೊಂಬಾಯಿ

ಬೀಚಿಯವರದು ಬ್ರಾಹ್ಮಣ ಕುಟುಂಬ. ಅವರ ಹೆಂಗಸರು ಮಕ್ಕಳಲ್ಲಿ ಪೋಲಿ ಪದ ಬಳಸಿದರೆ ಶೂದ್ರ ಮುಂಡೇದು ಆಗಿಬಿಡುತ್ತಾರೆ. ಹಾಗಾಗಿ ಬೀಚಿ ಅವರ ಮನೆಯಲ್ಲಿ ಪೋಲಿ ಪದಗಳು ನಿಷಿದ್ಧ. ಆದ್ದರಿಂದ ಅವರ ಸಣ್ಣ ಮಗನಿಗೆ ಮೂತ್ರ ಮಾಡುವ ಅಂಗಕ್ಕೆ ಬೊಂಬಾಯಿ ಅಂತ ಹೇಳಿ ಕೊಟ್ಟಿರುತ್ತಾರೆ. ಬೀಚಿಯವರು ಮದರಾಸಿನಲ್ಲಿ ಕೆಲಸ ಮಾಡುವಾಗ ಒಂದು ಸಂಜೆ ಬೀಚಿ ಕೆಲಸದಿಂದ ಮನೆಗೆ ಬಂದಾಗ ಅವರ ಸಣ್ಣ ಮಗ ಅಳ್ತಾ ಇರ್ತಾನೆ. ಮನೆಯಲ್ಲಿ ಯಾರೋ ಇಬ್ಬರು ಪರಿಚಯದ ಹೆಂಗಸರು ಬಂದು ಕೂತಿರುತ್ತಾರೆ. ಬೀಚಿಯವರ ಹೆಂಡತಿ ಅಳುತ್ತಿರುವ ಮಗನ ಕಡೆ ಗಮನ ಕೊಡದೆ ಬಂದಿರುವ ಅತಿಥಿಗಳಿಗೆ ಉಪಚಾರ ಮಾಡುತ್ತಿರುತ್ತಾರೆ. ಬೀಚಿಯವರಿಗೆ ಸಿಟ್ಟು ಬಂದು ಮಗನನ್ನು ತಕ್ಷಣ ಎತ್ತಿಕೊಂಡು ರಮಿಸುತ್ತಾ ಸಮಾಧಾನ ಮಾಡುತ್ತಾರೆ. ಆದರೆ ಮಗು ಸಮಾಧಾನವಾಗಲೊಲ್ಲದು. ಆಚೆ ಕರೆದುಕೊಂಡು ಹೋಗಿ ತಿಂಡಿ ತಿನಿಸು ಕೊಡಿಸುತ್ತಾರೆ. ಆದರೂ ಮಗು ಸಮಾಧಾನವಾಗುತ್ತಿಲ್ಲ. ಆದರೆ ತಿಂಡಿ ಕೈಗೆ ಸಿಕ್ಕಿದ ಮೇಲೆ ಅಮ್ಮ ಹೊಡೆದಳು ಎಂಬ ತಾನು ಅಳುತ್ತಿರುವುದರ ಕಾರಣವನ್ನು ಮಗು ಹೇಳುತ್ತದೆ. ಬೀಚಿ ಮಗು ಎತ್ತಿಕೊಂಡು ಕೋಪದಿಂದ ವಾಪಸ್ ಮನೆಗೆ ಬರುತ್ತಾರೆ. ಮಗುವಿಗೆ ಯಾಕೆ ಹೊಡೆದೆ ಎಂದು ಹೆಂಡತಿಯನ್ನು ಕೇಳುತ್ತಾರೆ. ಆಮೇಲೆ ಮಾತನಾಡೋಣ ಇರಿ ಎಂದು ಆಕೆ ಹೇಳುತ್ತಾರೆ. ಮನೆಗೆ ಬಂದ ಅತಿಥಿಗಳು ಹೋಗುವವರೆಗೆ ತಾಳ್ಮೆಯಿಂದ ಇದ್ದ ಬೀಚಿ ಅವರು ಹೋದ ತಕ್ಷಣ ಕೇಳುತ್ತಾರೆ, ಹೇಳು ಯಾಕೆ ಹೊಡೆದೆ ಮಗುವನ್ನು ಎಂದು. ಅವನನ್ನೇ ಕೇಳಿ ಎನ್ನುತ್ತಾರೆ ಅವರ ಹೆಂಡತಿ. ಕೊನೆಗೆ ಅವರೇ ಇಡೀ ವೃತ್ತಾಂತವನ್ನು ಹೇಳುತ್ತಾರೆ. ಮನೆಗೆ ಬಂದ ಅತಿಥಿಗಳು ಮಾತನಾಡುತ್ತಾ ಹೇಗೋ ದೇವರ ದಯದಿಂದ ಮದರಾಸು ನೋಡಿ ಆಯ್ತು. ಇನ್ನು ಬೊಂಬಾಯಿ ಒಂದು ನೋಡಬೇಕು ಎನ್ನುತ್ತಾರೆ. ಕೂಡಲೇ ಅಲ್ಲೇ ಇದ್ದ ಇವರ ಮಗ ಇಗೋ ಇಲ್ಲಿ ನೋಡಿ ಎಂದು ಚೆಡ್ಡಿ ಬಿಚ್ಚಿ ತೋರುತ್ತಾನೆ. ಕಥೆ ಕೇಳಿಸಿಕೊಂಡ ಬೀಚಿ ಬಿದ್ದು ಬಿದ್ದು ನಗುತ್ತಾರೆ.

**- ರಾಜೇಶ್ ಐತಾಳ್,** ಸುರತ್ಕಲ್

---

ಕನ್ನಡ ಕವನಗಳು ★★★★★★

# ಸಾರ್ಥಕ ಬದುಕು

ಒಂದಾಗಿ ಬಾಳಬೇಕಣ್ಣಾ
ಎಲ್ಲಾರು ಸೇರೀ
ಚಂದಾ..ದಿ ಬದುಕಬೇಕಣ್ಣಾ
//ಪ//
ಒಳ್ಳೆಯ ಬದುಕನು
ಬಾಳುವರಾಗೀ
ಸಲ್ಲುವ ನುಡಿಯನು
ನುಡಿಯುವರಾಗೀ
ರಾಗದ್ವೇಷವ ತೊರೆದವರಾಗೀ
ಸಂತಸದಿಂದಲಿ ಜೀವಿಪರಾಗೀ //
ಒಂದಾಗಿ// //1//
ಆಶಾಪಾಶವ ತೊರೆದವರಾಗೀ
ಮೋಸ ವಂಚನೆಯ ಬಿಟ್ಟವರಾಗೀ
ಹಿರಿಯರ ಸಮ್ಮುಖ ತಾಗೀ ಬಾಗೀ
ಸಂತತ ಸದ್ಗುಣವಂ ತರಾಗೀ //
ಒಂದಾಗಿ// //2//
ದೈವ ದೇವರ ಪೂಜಿಪರಾಗೀ
ಭಕ್ತಿಭಾವ ಸಂಸೇವಿಪರಾಗೀ
ಭಜನೆ ಕೀರ್ತನೆಯ
ಮಾಡುವರಾಗೀ
ನಿಜಗುಣಮನ ಹರಿದಾ ಸರಾಗೀ
//ಒಂದಾಗಿ// //3//
ದೀನರ ಕಷ್ಟಕೆ ಕರಗುವರಾಗೀ
ದಾನಮಾನ ಸನ್ಮಾನವರಾಗೀ
ಹಾನಿ ಮಾಡದೆಲ್ಲರಲೊಂದಾಗೀ
ಮಾನವ ಕುಲ ಸಂರಕ್ಷಕರಾಗೀ //
ಒಂದಾಗಿ// //4//
ನೇಮ ನಿಷ್ಠೆಗಳ ಅರಿತವರಾಗೀ
ಕಾಮ ಕ್ರೋಧಗಳ
ತೊರೆದವರಾಗೀ
ರಾಮ ಕೃಷ್ಣ ದೇವರೆ ಮೊದಲಾಗೀ
ನಾಮಸ್ಮರಣೆಯ ಮಾಡುವರಾಗೀ
//ಒಂದಾಗಿ// //5//
ಮಾಯಾ ಮೋಹವ ನೀಗುತ
ಸಾಗೀ
ಕಾಯಕವೇ ಕೈಲಾಸವಾಗೀ
ತಾಯಿ ಭಾರತಿಯ ಮಡಿಲಲಿ
ತೂಗೀ
ಆಯುರಾರೋಗ್ಯವಂ ತರಾಗೀ
//ಒಂದಾಗಿ// //6//
(ಭಾಗ್ಯದ ಲಕ್ಷ್ಮೀ ಬಾರಮ್ಮಾ.
ಎಂಬಂತೆ)

**- ಅನಂತ ಭಟ್** ಪೊಳಲಿ



# ಭಾವ ಲಹರಿ

## ಮಹಿಳಾ ದಿನಾಚರಣೆ: ಹೆಣ್ಣಿನ ಆತ್ಮಗೌರವದ ದಾಖಲೀಕರಣದ ಅನನ್ಯತೆ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಹಾಸನವು 2026ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಈ ಬಾರಿ ಹಾಸನದಲ್ಲಿ ಮಹಿಳಾ ಚೈತನ್ಯ ದಿನವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಹೊರತರಲಾಗುತ್ತಿರುವ ಸಾಂದರ್ಭಿಕ ಗ್ರಂಥ ಹಾಸನ ಮಣ್ಣಿನ ಹೆಣ್ಣು ದನಿಗಳು ಕೃತಿಗೆ ಸಾಹಿತಿ ಬಾನು ಮುಷ್ತಾಕ್ ಅವರು ಬರೆದ ಮುನ್ನುಡಿ ಇಲ್ಲಿದೆ.

ಹಾಸನ ಎಂದರೆ ಕೇವಲ ಶಿಲ್ಪಕಲೆಯ ಬೀಡಲ್ಲ ಮತ್ತು ಪ್ರವಾಸಿಗರ ಕಣ್ಮನ ತಣಿಸುವ ತಾಣ ಮಾತ್ರವಲ್ಲ, ಅದು ಕೆಚ್ಚೆದೆಯ ಹೆಣ್ಣುಮಕ್ಕಳನ್ನು ಹೆತ್ತ ಪುಣ್ಯಭೂಮಿ ಕೂಡ. ಈ ಮಣ್ಣಿನ ಸತ್ವದಲ್ಲೇ ಒಂದು ವಿಶಿಷ್ಟವಾದ ಗುಣವಿದೆ. ಇಲ್ಲಿನ ಗಾಳಿಯಲ್ಲಿ ಹೊಯ್ಸಳರ ಕಾಲದ ವೀರ ವನಿತೆಯರ ಸ್ಪಂದನವಿದೆ; ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ದುಡಿಯುವ ತಾಯಂದಿರ ಬೆವರಿನ ಘಮವಿದೆ. ಹಾಸನ ಎಂಬುದು ಇತಿಹಾಸದ ಶಿಲಾಶಾಸನಗಳಲ್ಲಿ ಮಾತ್ರವಲ್ಲ, ಬದುಕಿನ ಉಸಿರಿನಲ್ಲಿ ಕೂಡ ಉಳಿದಿರುವ ಮಣ್ಣು. ಹಾಸನ ಮಣ್ಣಿನ ಹೆಣ್ಣು ದನಿಗಳು ಎಂಬ ಕೃತಿ ಒಂದು ಸಾಂದರ್ಭಿಕ ಪುಸ್ತಕ ಮಾತ್ರವಲ್ಲ; ಅದು ಈ ನೆಲದ ಅಸ್ಮಿತೆಯನ್ನು ಎತ್ತಿ ಹಿಡಿಯುವ ಸಾಂಸ್ಕೃತಿಕ ದಸ್ತಾವೇಜು. ಈ ಕೃತಿಗೆ ಮುನ್ನುಡಿ ಬರೆಯುವುದು ನನ್ನ ಪಾಲಿನ ಹೆಮ್ಮೆ ಮಾತ್ರವಲ್ಲ, ಈ ಮಣ್ಣಿನ ಮಗಳಾಗಿ ನನ್ನ ಕರ್ತವ್ಯವೂ ಹೌದು.

ನಮ್ಮ ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಅನೇಕ ಮಹಿಳಾ ವ್ಯಕ್ತಿತ್ವಗಳು ಕಾಲದ ಗರ್ಭದಲ್ಲಿ ಮರೆಯಾಗಿರುವುದು ಗೋಚರಿಸುತ್ತದೆ. ಅನಾಮಿಕತೆಯ ಸುಳಿಯಲ್ಲಿ ಕರಗಿಹೋಗಿರುವ ಅನೇಕ ಜೀವಿತಗಳು ಮರೆಯಾಗಿ ಹೋಗಿವೆ. ಚರಿತ್ರೆಯು ಬಹುಪಾಲು ಪುರುಷಪ್ರಧಾನವಾಗಿ ದಾಖಲಿಸಲ್ಪಟ್ಟ ಕಾರಣದಿಂದ ಸಮಾಜವನ್ನು ಕಟ್ಟಿ ಬೆಳೆಸಿದ ಎಷ್ಟೋ ಸ್ತ್ರೀಯರ ಹೆಸರುಗಳು ಮತ್ತು ಸಾಧನೆಗಳು ಅಕ್ಷರ ರೂಪಕ್ಕೆ ಬರಲೇ ಇಲ್ಲ. ಆದರೆ ಈ ಕೃತಿ ಆ ಮರೆತುಹೋದ ಬೇರುಗಳನ್ನು ಅರಸಿ ಹೊರಟಿದೆ. ಮಣ್ಣಿನ ಆಳದಲ್ಲಿ ಮೌನವಾಗಿ ಅಡಗಿದ್ದು ಇಡೀ ಮರಕ್ಕೆ ಚೈತನ್ಯ ನೀಡುವ ಬೇರುಗಳಂತೆ ಈ ಮಹಿಳೆಯರು ಸಾಮಾಜಿಕವಾಗಿ ತೊಡಗಿಸಿಕೊಂಡಿದ್ದಾರೆ. ಬೇರುಗಳನ್ನು ಗುರುತಿಸಿ ಇಂದಿನ ಚಿಗುರುಗಳೊಂದಿಗೆ ಬೆಸೆಯುವ ಮಹತ್ವದ ಕಾರ್ಯವನ್ನು ಈ ಗ್ರಂಥ ಸಾಧಿಸಿದೆ.

ಹಾಸನ ಎನ್ನುವುದು ಕೇವಲ ಭೌಗೋಳಿಕ ಗಡಿಯ ಸೂಚಕವಲ್ಲ. ಇದು ಬೆಳೆಗಳ ಹಸಿರು, ಕಾಫಿ ತೋಟಗಳ ಸುವಾಸನೆ, ತೆಂಗಿನ ಮರಗಳ ಅದಮ್ಯ ಚೇತನ, ಹೊಯ್ಸಳರ ಶಿಲ್ಪಕಲೆಯ ಸೌಂದರ್ಯ, ಶಿಕ್ಷಣ ಮತ್ತು

ಸಂಸ್ಕೃತಿಯ ಮೃದು ಹರಿವುಗಳ ಸಾಂಸ್ಕೃತಿಕ ಸಂಕಲ್ಪ. ಈ ಮಣ್ಣಿನೊಳಗೆ ಆಳವಾಗಿ ಹರಡಿರುವುದು ಅನೇಕ ಮಹಿಳೆಯರ ಅಸಂಖ್ಯ ಹೆಜ್ಜೆಗಳು. ಮನೆಯೊಳಗೆ ಕುಟುಂಬವನ್ನು ರೂಪಿಸಿದವರು ಅವರು; ಹೊಲಗಳಲ್ಲಿ ಬೆವರಿನ ಮುತ್ತುಗಳಿಂದ ಅನ್ನವನ್ನು ಬೆಳೆದವರು, ಶಾಲೆಗಳಲ್ಲಿ ಅಕ್ಷರದ ದೀಪ ಹಚ್ಚಿದವರು, ಆಸ್ಪತ್ರೆಗಳಲ್ಲಿ ಸೇವೆಯ ಕರ್ತವ್ಯ ನಿರ್ವಹಿಸಿದವರು, ನ್ಯಾಯದ ಹಾದಿಯಲ್ಲಿ ಧ್ವನಿ ಎತ್ತಿದವರು ಈ ಧೀಮಂತ ಮಹಿಳೆಯರು. ಕಲೆ ಮತ್ತು ಸಾಹಿತ್ಯದ ವೇದಿಕೆಯಲ್ಲಿ ಸಮಾಜದ ಅಂತರಂಗವನ್ನು ಪ್ರತಿಬಿಂಬಿಸಿದವರು ಅವರು. ಆದರೆ ಈ ಎಲ್ಲಾ ಬದುಕುಗಳು ಸಮಾನವಾಗಿ ದಾಖಲಾಗಿದೆಯೇ? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲ.

ಇತಿಹಾಸದ ಪುಟಗಳಲ್ಲಿ ಮಹಿಳೆಯರ ಅನುಪಸ್ಥಿತಿಯು ಅವರ ಸೃಜನಶೀಲ ತೊಡಗುವಿಕೆಯ ನಿರಾಕರಣೆಯಾಗಿದೆ ಮತ್ತು ದುರುದ್ದೇಶಪೂರ್ವಕ ನಿರ್ಲಕ್ಷ್ಯದ ಫಲವಾಗಿದೆ. ಶತಶತಮಾನಗಳಿಂದ ಇತಿಹಾಸ ಬರೆಯುವ ಅಧಿಕಾರವು ಸಾಂಸ್ಕೃತಿಕ ಮತ್ತು ರಾಜಕೀಯ ಶಕ್ತಿಯ ಕೈಯಲ್ಲಿತ್ತು. ಯುದ್ಧಗಳು, ರಾಜಕೀಯ ಬದಲಾವಣೆಗಳು, ಆಡಳಿತದ ಸಾಧನೆಗಳು ಮೊದಲಾದವು ಮಾತ್ರ ಇತಿಹಾಸವೆಂದು ಪರಿಗಣಿಸಲ್ಪಟ್ಟವು. ಮನೆಯೊಳಗಿನ ಶ್ರಮ, ಆರೈಕೆಯ ಕರ್ತವ್ಯ, ಮೌಲ್ಯಗಳನ್ನು ಸಾಗಿಸುವ ಸಂಸ್ಕೃತಿ, ಮಕ್ಕಳ ಮನಸ್ಸುಗಳನ್ನು ರೂಪಿಸುವ ತಾಯಿಯ ಜ್ಞಾನ- ಇವೆಲ್ಲವನ್ನೂ ಆಕೆಯ ಸಹಜ ಕರ್ತವ್ಯವೆಂದು ಬದಿಗಿರಿಸಿ ಸಾಧನೆ ಎಂದು ಗುರುತಿಸಲಿಲ್ಲ.

ಶಿಕ್ಷಣದ ಅವಕಾಶವಿಲ್ಲದೆ, ಆರ್ಥಿಕ ಸ್ವಾತಂತ್ರ್ಯದ ಕೊರತೆಯಲ್ಲಿ, ಸಾಮಾಜಿಕ ನಿರ್ಬಂಧಗಳ ಮಧ್ಯೆ ಬದುಕಿದ ಮಹಿಳೆಯರು ತಮ್ಮ ಕಥೆಯನ್ನು ತಾವೇ ಬರೆಯಲು ಸಾಧ್ಯವಾಗಲಿಲ್ಲ. ಅವರ ಅನುಭವಗಳು ಜನಪದ ಗೀತೆಗಳಲ್ಲಿ, ಹಬ್ಬಗಳ ಆಚರಣೆಗಳಲ್ಲಿ, ಮನೆಯ ಹಿರಿಯರ ಮಾತುಗಳಲ್ಲಿ ಉಳಿದವು; ಆದರೆ ಅಧಿಕೃತ ದಾಖಲಾತಿಗಳಲ್ಲಿ ಸ್ಥಾನ ಪಡೆಯಲಿಲ್ಲ. ಹೀಗಾಗಿ ಮಹಿಳೆಯರ ಇತಿಹಾಸ ಮೌನದ ಇತಿಹಾಸವಾಗಿ ಉಳಿಯಿತು.

ಇಂತಹ ಹಿನ್ನೆಲೆಯಲ್ಲಿ ಹಾಸನ ಮಣ್ಣಿನ ಹೆಣ್ಣು ದನಿಗಳು- ಕೃತಿ ಸಾಂಸ್ಕೃತಿಕ ಪುನರುತ್ಥಾನದ ಸಂಕೇತವಾಗಿ ಕಾಣುತ್ತದೆ. ಇದು ಕೇವಲ ಸಾಧಕರ ಪಟ್ಟಿ ಅಲ್ಲ; ಉದ್ದೇಶಪೂರ್ವಕ ಮರೆವಿನ



ವಿರುದ್ಧದ ಪ್ರಜ್ಞಾಪೂರ್ವಕ ಹೋರಾಟ. ಬೇರುಗಳು ಗೋಚರಿಸುವುದಿಲ್ಲ; ಆದರೆ ಅವುಗಳಿಲ್ಲದೆ ಮರವು ಗಗನವನ್ನು ಚುಂಬಿಸುವುದಿಲ್ಲ. ಹಾಗೆಯೇ ಹಾಸನದ ಮಹಿಳೆಯರ ಮೌನ ಶ್ರಮವೇ ಈ ಜಿಲ್ಲೆಯ ಸಾಮಾಜಿಕಸಾಂಸ್ಕೃತಿಕ ಕಟ್ಟಡದ ಆಧಾರ. ಅದಕ್ಕೆ ದನಿಯಾಗುವ ಪ್ರಾಮಾಣಿಕ ಪ್ರಯತ್ನ ಇಲ್ಲಿ ಎದ್ದು ತೋರುತ್ತದೆ.

ಈ ಕೃತಿ ಆ ಕಾಲದ ಸತ್ವಗಳಿಗೆ ಹೆಸರು ಕೊಡುತ್ತದೆ; ಮೌನ ಸಾಧನೆಗಳಿಗೆ ಶಬ್ದ ನೀಡುತ್ತದೆ; ಮರೆಯಾದ ಬದುಕಿಗೆ ಇತಿಹಾಸದ ಬೆಳಕು ಹರಡುತ್ತದೆ. ಹಿಂದಿನ ಸಾಧಕಿಯರ ಮತ್ತು ಇಂದಿನ ಪ್ರೇರಕ ಮಹಿಳೆಯರ ಜೀವನಗಾಥೆಗಳನ್ನು ಒಂದೇ ವಂಶವೃಕ್ಷದಂತೆ ಜೋಡಿಸುತ್ತದೆ. ಇಂದಿನ ಮಹಿಳಾ ಸಾಧಕರು ವಿಜ್ಞಾನ, ವೈದ್ಯಕೀಯ, ಆಡಳಿತ, ಕ್ರೀಡೆ, ಸಾಹಿತ್ಯ, ಉದ್ಯಮಶೀಲತೆ, ಸಾಮಾಜಿಕ ಸೇವೆ ಮುಂತಾದ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಅಸ್ತಿತ್ವವನ್ನು ದೃಢಪಡಿಸುತ್ತಿದ್ದಾರೆ. ಅವರ ಘೋಷಣೆಯ ಹಿಂದೆ ಹಿಂದಿನ ತಲೆಮಾರಿನ ಮಹಿಳೆಯರ ಮೌನ ಮತ್ತು ಸಹನೆಯ ಪ್ರತಿಧ್ವನಿಯಿದೆ. ಈ ಕೃತಿ ಕಾಲಘಟ್ಟಗಳನ್ನು ಸೇರಿಸುವ ಸೇತುವೆ. ಇದು ಪರಂಪರೆ ಮತ್ತು ಪ್ರಗತಿಯನ್ನು ಒಂದೇ ಮಣ್ಣಿನ ಎರಡು ಕವಲುಗಳೆಂದು ಪರಿಗಣಿಸುತ್ತದೆ.

ಯಾವುದೇ ಒಂದು ನಾಡಿನ ಪ್ರಗತಿಯನ್ನು ಅಲ್ಲಿನ ಮಹಿಳೆಯರ ಸ್ಥಿತಿಗತಿಯ ಮೌಲ್ಯಮಾಪನದ ಮೂಲಕ ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಹಾಸನದ ಮಹಿಳಾ ಶಕ್ತಿಯನ್ನು ದಾಖಲಿಸುವ ಪ್ರಯತ್ನಕ್ಕೆ ಮೂರು ಪ್ರಮುಖ ಆಯಾಮಗಳಿವೆ. ಸ್ಥಳೀಯ ಅಸ್ಮಿತೆಯ ಜಾಗೃತಿ ಕೂಡ ಮುಖ್ಯವಾಗುತ್ತಿದೆ. ಜಾಗತೀಕರಣದ ಅಬ್ಬರದಲ್ಲಿ ನಾವು ನಮ್ಮ ಇತಿಹಾಸ ಮತ್ತು ಸಾಧಕರನ್ನು ಮರೆಯುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಹಾಸನದ ಪ್ರತಿ ಗ್ರಾಮದ ಕಣಕಣದಲ್ಲೂ ಇರುವ ಮಹಿಳಾ ಸಾಧನೆಯನ್ನು ಗುರುತಿಸುವುದು ನಮ್ಮ ಜಿಲ್ಲೆಯ ಆತ್ಮಗೌರವವನ್ನು ಎತ್ತಿಹಿಡಿಯುವ ಕೆಲಸವಾಗಿದೆ. ಹಿಂದಿನ ತಲೆಮಾರಿನ ಸಾಧಕಿಯರಲ್ಲಿದ್ದ ತಾಳ್ಮೆ, ಸೌಜನ್ಯ ಹಾಗೂ ಆಧುನಿಕ ಯುಗದ ಸ್ತ್ರೀಯಲ್ಲಿರುವ ತಾಂತ್ರಿಕ ವೇಗ ಮತ್ತು ಬೌದ್ಧಿಕ ಚುರುಕುತನವನ್ನು ಈ ಚಿಂತನೆಗಳು ಪರಸ್ಪರ ಇಲ್ಲಿ ಸಂಧಿಸುವಂತೆ ಮಾಡಿವೆ. ಇದು ಹಳೆಯ ಬೇರು ಮತ್ತು ಹೊಸ ಚಿಗುರಿನ ಸುಂದರ ಸಂಗಮವಾಗಿದೆ. ಹಾಗೂ ಮುಂಬರುವ ಹೆಣ್ಣುಮಕ್ಕಳಿಗೆ ತಮ್ಮ ನೆಲದ ಶಕ್ತಿಯನ್ನು ಮನವರಿಕೆ ಮಾಡಿಕೊಡುವ ಕೈಪಿಡಿಯಾಗಿದೆ.

ಮಹಿಳೆಯರ ಇತಿಹಾಸವನ್ನು ದಾಖಲಿಸುವುದು ಕೇವಲ ಭೂತಕಾಲದ ಸ್ಮರಣೆ ಅಲ್ಲ; ಅದು ನ್ಯಾಯದ ಮರುಸ್ಥಾಪನೆ. ಒಬ್ಬ ಮಹಿಳೆಯ ಬದುಕಿನ ಹೋರಾಟ ದಾಖಲಾದಾಗ ಆಕೆಯ ಶ್ರಮಕ್ಕೆ ಗುರುತು ಸಿಗುತ್ತದೆ.

> **ಮಹಿಳೆಯರ ಇತಿಹಾಸವನ್ನು ದಾಖಲಿಸುವುದು ಕೇವಲ ಭೂತಕಾಲದ ಸ್ಮರಣೆ ಅಲ್ಲ; ಅದು ನ್ಯಾಯದ ಮರುಸ್ಥಾಪನೆ. ಒಬ್ಬ ಮಹಿಳೆಯ ಬದುಕಿನ ಹೋರಾಟ ದಾಖಲಾದಾಗ ಆಕೆಯ ಶ್ರಮಕ್ಕೆ ಗುರುತು ಸಿಗುತ್ತದೆ. ಮಾನ್ಯತೆ ಪಡೆದ ಶ್ರಮ ಆತ್ಮಗೌರವವನ್ನು ಹೆಚ್ಚಿಸುತ್ತದೆ; ಆತ್ಮಗೌರವವೇ ಮುಕ್ತಿಯ ಮೊದಲ ಹೆಜ್ಜೆ. ಈ ಗ್ರಂಥದ ಬಿಡುಗಡೆ ಕೂಡ ಒಂದು ರೂಪಕ. ಇದು ಕೇವಲ ಪುಸ್ತಕದ ಅನಾವರಣವಲ್ಲ; ಬಂಧಿತ ಕಥೆಗಳ ಬಿಡುಗಡೆ. ಒಂದು ಬಾರಿ ಮಹಿಳೆಯ ಹೋರಾಟ ಮತ್ತು ಪ್ರತಿರೋಧದ ಕಥೆ ಸಾರ್ವಜನಿಕ ವೇದಿಕೆಗೆ ಬಂದರೆ ಅದು ಸಮಾಜದ ಮನೋಭಾವವನ್ನು ಪ್ರಶ್ನಿಸುತ್ತದೆ.**



ಮಾನ್ಯತೆ ಪಡೆದ ಶ್ರಮ ಆತ್ಮಗೌರವವನ್ನು ಹೆಚ್ಚಿಸುತ್ತದೆ; ಆತ್ಮಗೌರವವೇ ಮುಕ್ತಿಯ ಮೊದಲ ಹೆಜ್ಜೆ. ಈ ಗ್ರಂಥದ ಬಿಡುಗಡೆ ಕೂಡ ಒಂದು ರೂಪಕ. ಇದು ಕೇವಲ ಪುಸ್ತಕದ ಅನಾವರಣವಲ್ಲ; ಬಂಧಿತ ಕಥೆಗಳ ಬಿಡುಗಡೆ. ಒಂದು ಬಾರಿ ಮಹಿಳೆಯ ಹೋರಾಟ ಮತ್ತು ಪ್ರತಿರೋಧದ ಕಥೆ ಸಾರ್ವಜನಿಕ ವೇದಿಕೆಗೆ ಬಂದರೆ ಅದು ಸಮಾಜದ ಮನೋಭಾವವನ್ನು ಪ್ರಶ್ನಿಸುತ್ತದೆ. ಸಾಧನೆ ಎಂಬ ಪದದ ಅರ್ಥವನ್ನು ಮರು ಮೌಲ್ಯ ಮಾಡಲು ಒತ್ತಾಯಿಸುತ್ತದೆ; ಮನೆ ಮತ್ತು ಹೊರಜಗತ್ತು ಎಂಬ ಕೃತಕ ವಿಭಜನೆಗಳನ್ನು ತೊಡೆದುಹಾಕುತ್ತದೆ. ಪುಸ್ತಕ ಬಿಡುಗಡೆ ಒಂದು ಸಾಂಸ್ಕೃತಿಕ ವಿಧಿ. ಆದರೆ ಈ ವಿಧಿ ಮಹಿಳೆಯರ ಬಿಡುಗಡೆಯ ಹಾದಿಯಲ್ಲಿ ಒಂದು ಸಂಕೇತಾತ್ಮಕ ಹೆಜ್ಜೆ. ಏಕೆಂದರೆ ಓದಿಸಿಕೊಂಡು ಹೆಸರು ಪಡೆದ ಕಥೆ ಮತ್ತೆ ಮೌನವಾಗುವುದಿಲ್ಲ. ಇತಿಹಾಸದಲ್ಲಿ ಸ್ಥಾನ ಪಡೆದ ಜೀವನ ಮುಂದಿನ ಪೀಳಿಗೆಗೆ ಪ್ರೇರಣೆಯಾಗುತ್ತದೆ. ಒಬ್ಬ ಮಹಿಳೆ ಈ ಪುಸ್ತಕದ ಒಳಗನ್ನು ಅರಿತಾಗ ನನಗೂ ಸಾಧ್ಯ ಎಂಬ ವಿಶ್ವಾಸ ಅವಳ ಅಂತರಂಗದಲ್ಲಿ ನೆಲೆಯಾಗುತ್ತದೆ. ಒಬ್ಬ ಯುವಕ ಇದನ್ನು ಓದಿದಾಗ ಸಮಾನತೆ ನನ್ನ ಹೊಣೆಗಾರಿಕೆ ಎಂಬ ಅರಿವು ಅವನ ಮನದಲ್ಲಿ ಮೂಡುತ್ತದೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಕಳೆದ 13 ವರ್ಷಗಳಿಂದ ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಮಹಿಳಾ ದಿನವನ್ನು ಆಚರಿಸುತ್ತಿದ್ದು, ಈ ವರ್ಷ ಹಾಸನ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದೆ. ಮಾರ್ಚ್ 7 ಮತ್ತು 8ರಂದು ಬೃಹತ್ ಮಹಿಳಾ ಸಮಾವೇಶವನ್ನು ಹಾಸನದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಇದು ಕೇವಲ ಒಂದೆರಡು ದಿನದ ಆಚರಣೆ ಮಾತ್ರವಲ್ಲ; ಅದು ಆತ್ಮಪರಿಶೀಲನೆಯ ಕ್ಷಣ. ಈ ಸಂದರ್ಭದಲ್ಲಿ ಕೃತಿಯು ಪ್ರಕಟಗೊಳ್ಳುತ್ತಿರುವುದು ಹಿಸ್ ಸ್ಟೋರಿಗೆ ಪರ್ಯಾಯವಾಗಿ ಹರ್ ಸ್ಟೋರಿ ಕಟ್ಟಿಕೊಡುವ ಧೀಮಂತ ಪ್ರಕ್ರಿಯೆಯಾಗಿದೆ. ನಮ್ಮ ಸಮಾಜದಲ್ಲಿ ಇನ್ನೂ ಅಸಮಾನತೆಗಳಿವೆ, ತಾರತಮ್ಯವಿದೆ, ದೌರ್ಜನ್ಯವಿದೆ. ಆದರೆ ಇಲ್ಲಿ ದಾಖಲಾದ ಪ್ರತಿಯೊಂದು ಜೀವನಾನುಭವವು ಅಸಮಾನತೆಗಳ ವಿರುದ್ಧದ ಮೌನ ಪ್ರತಿರೋಧವಾಗಿದೆ. ಈ ಕೃತಿ ಕೇವಲ ಸ್ಮರಣಿಕೆ ಅಲ್ಲ; ಇದು ಸಾಮಾಜಿಕ ಜಾಗೃತಿಯ ದೀಪ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂದರ್ಭವು ಸ್ತ್ರೀಶಕ್ತಿಯ ಆತ್ಮಾವಲೋಕನಕ್ಕೆ, ಸಂಭ್ರಮಕ್ಕೆ ಒಂದು ವೇದಿಕೆಯಾಗಿದೆ. ಆ ನೆವದಲ್ಲೇ ಈ ಕೃತಿ ಬಿಡುಗಡೆಯಾಗುತ್ತಿದೆ. ನಿಜಕ್ಕೂ ಇದು ಸಾಂಕೇತಿಕ ಮಾತ್ರವಲ್ಲ, ಅರ್ಥಪೂರ್ಣ ಕೂಡ.

ಹಾಗೇ ಇದು ಕೇವಲ ಒಂದು ಪುಸ್ತಕದ ಪೂರ್ಣತೆ ಅಲ್ಲ. ಒಂದು ಮೌನ ಇತಿಹಾಸದ ನ್ಯಾಯಪ್ರಾಪ್ತಿ. ಹಾಸನದ ಮಣ್ಣಿನಲ್ಲಿ ಅನೇಕ ದಶಕಗಳಿಂದ ಬೇರು ಬಿಟ್ಟಿದ್ದ ಮಹಿಳಾ ಶ್ರಮಕ್ಕೆ ಈಗ ಶಬ್ದ ಸಿಕ್ಕಿದೆ, ರೂಪ ಸಿಕ್ಕಿದೆ, ಗೌರವ ಸಿಕ್ಕಿದೆ. ದಾಖಲಾಗದ ಬದುಕುಗಳು ಈಗ ದಾಖಲೆಯಾದವು; ಹೆಸರು ಇಲ್ಲದ ಸಾಧನೆಗಳು ಈಗ ಹೆಸರು ಪಡೆದವು. ಎಷ್ಟೊಂದು ಕ್ಷೇತ್ರಗಳಲ್ಲಿ ಹೆಣ್ಣು ತೊಡಗಿಕೊಂಡಿದ್ದರೂ ಅದು ಗೋಚರಿಸುತ್ತಿರಲಿಲ್ಲ. ಈಗ ಎದ್ದು ತೋರುವಂತಾಯ್ತು. ಈ ಕೃತಿ ನಮಗೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ: ಮಹಿಳೆಯರ ಇತಿಹಾಸವನ್ನು ಬರೆಯುವುದು ಅಂದರೆ ಸಮಾಜದ ಅರ್ಧ ಆತ್ಮವನ್ನು ಮರುಪಡೆಯುವುದು! ಮಹಿಳೆಯರ ಶ್ರಮ ಮತ್ತು ಸಾಧನೆಗಳನ್ನು ಮಾನ್ಯಗೊಳಿಸಿದಾಗ ಮಾತ್ರ ಸಮಾಜದ ಇತಿಹಾಸ ಸಂಪೂರ್ಣವಾಗುತ್ತದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಚೌಕಟ್ಟಿನಲ್ಲಿ ಈ ಕೃತಿ ವಿಶೇಷ ಅರ್ಥ ಪಡೆಯುತ್ತದೆ. ಮಹಿಳಾ ದಿನವೆಂದರೆ ಕೇವಲ ಗೌರವ ಸಮಾರಂಭವಲ್ಲ; ಅದು ಸಮಾನತೆಯತ್ತ, ನ್ಯಾಯದತ್ತ, ಅವಕಾಶಗಳ ಸಮಾನ ಹಂಚಿಕೆಯತ್ತ ಸಾಮೂಹಿಕ ಪ್ರತಿಜ್ಞೆ ಮಾಡುವ ಕ್ಷಣ. ಇಂತಹ ದಿನದಲ್ಲಿ ಕೇವಲ ಒಂದು ತಿಂಗಳ ಒಳಗೆ ಸ್ಥಳೀಯ ಮಹಿಳೆಯರು, ಪುರುಷರೊಡಗೂಡಿ ತಮ್ಮದೇ ಜಿಲ್ಲೆಯ ಸಾಧಕಿಯರ, ವಿವಿಧ ಕ್ಷೇತ್ರಗಳಲ್ಲಿ ತಮ್ಮಷ್ಟಕ್ಕೇ ತೊಡಗಿದ್ದ ಮಹಿಳಾ ಬದುಕುಗಳನ್ನು, ಸಾಮುದಾಯಿಕ, ಸಂಘಟನಾತ್ಮಕ, ಸಾಂಸ್ಥಿಕ ಹೆಣ್ಣಿನ ಸಾರಸತ್ವವನ್ನು ಸಂಗ್ರಹಿಸಿ, ಸಂಶೋಧಿಸಿ, ದಾಖಲಿಸಿ ಪುಸ್ತಕ ರೂಪದಲ್ಲಿ ಸಮಾಜಕ್ಕೆ ಅರ್ಪಿಸಿರುವುದು ಒಂದು ಅಪರೂಪದ ಸಾಂಸ್ಕೃತಿಕ ಕ್ರಾಂತಿ! ಇದು ಜಾಗತಿಕ ಮಹಿಳಾ ಹೋರಾಟದ ಮೌಲ್ಯಗಳನ್ನು ಸ್ಥಳೀಯ ನೆಲೆಯೊಂದಿಗೆ ಜೋಡಿಸುವ ಕಾರ್ಯ. ಈ ಪುಸ್ತಕವನ್ನು ರೂಪಿಸಿದ ಮಹಿಳೆಯರ ಶ್ರಮಕ್ಕೆ, ಜೊತೆಗೂಡಿದ ಪುರುಷರ ಸಹಕಾರ, ಸ್ನೇಹವು ಕೂಡಿಯೇ ಮಹಿಳಾ ದಿನದ ನಿಜವಾದ ಅರ್ಥ, ಸ್ಮರಣೆ, ಮಾನ್ಯತೆ ಮತ್ತು ಮುಕ್ತಿಯ ಹಾದಿಯಲ್ಲಿ ಸಮೂಹ ಹೆಜ್ಜೆಯಾಗಿದೆ.

ಈ ಕೃತಿ ಹಾಸನದ ಮಣ್ಣಿನ ಹೆಣ್ಣುಮಕ್ಕಳ ಮತ್ತು ಇಡೀ ಕರ್ನಾಟಕದ ಮಹಿಳೆಯರ ಆತ್ಮಗೌರವಕ್ಕೆ ಸಾಕ್ಷಿಯಾಗಲಿ. ಈ ಬೆಳಕು ಇನ್ನಷ್ಟು ವಿಶಾಲವಾಗಿ ಹರಡಿ ಹೊಸ ಕನಸುಗಳಿಗೆ ಜನ್ಮ ನೀಡಲಿ. ಈ ದಾಖಲಾತಿ ಮುಂದಿನ ಪೀಳಿಗೆಗೆ ದಾರಿಯಾಗಲಿ. ಎಲ್ಲರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಚರಣೆಯ ಶುಭಶಯಾಗಳು.....

- **ಬಾನು** ಮುಷ್ತಾಕ್

> **ಒಂದು ಆವಿಷ್ಕಾರ/ಉತ್ಪನ್ನವು ಹೊಸದಾಗಿ ಅನಾವರಣಗೊಂಡು ಬಳಕೆದಾರರ ಮೆಚ್ಚುಗೆಯನ್ನು ಪಡೆಯುವಲ್ಲಿ ಯಶಸ್ವಿಯಾದರೆ, ಅದು ಕಾಲಕ್ರಮೇಣ ಬಳಕೆದಾರನ ಸಂಗಾತಿಯಾಗುತ್ತದೆ. ಅದರಲ್ಲೂ ಅದು ಬಳಕೆದಾರರ ದಿನನಿತ್ಯದ ಬದುಕಿಗೆ ಆಸರೆಯಾಗಿ ಜತೆಗೆ ಮನರಂಜನೆಯನ್ನೂ ನೀಡುತ್ತಿದ್ದರೆ, ತ್ವರಿತವಾಗಿ ಅದರ ಬಳಕೆಯು ಹವ್ಯಾಸವಾಗಿ, ಕೊನೆ ಗೊಮ್ಮೆ ಅರೆಕ್ಷಣವೂ ಬಿಟ್ಟಿರಲಾರದ ಸಂಗಾತಿಯಾಗಿ ಮಾರ್ಪಡುತ್ತದೆ.**

## ಸ್ಮಾರ್ಟ್‌ಫೋನ್ ಬಳಕೆಯ ನಿಯಂತ್ರಣ ಕಾರ್ಯಸಾಧ್ಯವೇ?

ಯಕ್ಷ ಪ್ರಶ್ನೆ

ಹದಿನಾರು ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಫೋನ್/ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧಿಸಲು/ನಿಯಂತ್ರಿಸಲು ಚಿಂತನೆ ನಡೆಸಿರುವ ರಾಜ್ಯ ಸರಕಾರವು ಇದಕ್ಕೆ ಪೂರಕವಾಗಿ ಮೊಬೈಲ್ ಬಿಡಿ, ಪುಸ್ತಕ ಹಿಡಿ ಎಂಬ ಅಭಿಯಾನವನ್ನು ರೂಪಿಸುತ್ತಿದೆಯಂತೆ. ಆಂಧ್ರ ಮತ್ತು ಗೋವಾ ರಾಜ್ಯಗಳು ಕೂಡ ಈ ನಿಟ್ಟಿನಲ್ಲಿ ಆಲೋಚಿಸುತ್ತಿವೆಯಂತೆ. ಈ ವಿಚಾರಧಾರೆಯು ಇನ್ನಿತರ ರಾಜ್ಯಗಳಿಗೂ ಸಮೂಹಸನ್ನಿಯಂತೆ ಹಬ್ಬಿದರೆ ಅಚ್ಚರಿಯೇನಿಲ್ಲ.

ಆಸ್ಟ್ರೇಲಿಯಾ, ಸ್ಪೇನ್, ಮಲೇಷ್ಯಾ, ಫ್ರಾನ್ಸ್ ಮತ್ತು ನಾರ್ವೆ ದೇಶಗಳಲ್ಲಿ ಇತ್ತೀಚೆಗೆ ಇಂಥ ನಿಯಂತ್ರಣ ಜಾರಿಗೆ ಬಂದಿದೆ; ಆದರೆ ಅವು ನಿಷೇಧ/ನಿಯಂತ್ರಣವನ್ನು ಯಾವ ರೀತಿಯಲ್ಲಿ ಜಾರಿಗೊಳಿಸಿವೆ ಎಂಬುದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯಿಲ್ಲ.

ಅಮೆರಿಕ, ಡೆನ್ಮಾರ್ಕ್ ಮತ್ತು ಗ್ರೀಸ್ ದೇಶಗಳಲ್ಲೂ ಇಂಥ ಚಿಂತನೆ ನಡೆದಿದೆಯಂತೆ. ಚೀನಾದಲ್ಲಿ ಮಕ್ಕಳಿಗೆ ಮೊಬೈಲ್ ನೀಡಲು ಪೋಷಕರ ಅನುಮತಿ ಕಡ್ಡಾಯವಾದರೆ, ಇಂಗ್ಲೆಂಡ್‌ನಲ್ಲಿ ಸ್ವಯಂಪ್ರೇರಿತ ನಿಷೇಧವನ್ನು ಹೇರಲಾಗಿದೆಯಂತೆ.

ಒಟ್ಟಾರೆಯಾಗಿ ಹೇಳುವುದಾದರೆ, ಈ ನಿಷೇಧ ಮತ್ತು ನಿಯಂತ್ರಣಗಳ ಅನುಷ್ಠಾನದ ಪರಿ ಹಾಗೂ ಅದರ ಫಲಶ್ರುತಿಗಳನ್ನು ಕುತೂಹಲದಿಂದ ನಿರೀಕ್ಷಿಸಲಾಗುತ್ತಿದ್ದು, ಒಂದೊಮ್ಮೆ ಅವು ಪರಿಣಾಮಕಾರಿಯಾಗಿ ಕಂಡುಬಂದರೆ ಇದೊಂದು ಜಾಗತಿಕ ಅಭಿಯಾನವಾಗಬಹುದು.

ಒಂದು ಆವಿಷ್ಕಾರ/ಉತ್ಪನ್ನವು ಹೊಸದಾಗಿ ಅನಾವರಣಗೊಂಡು ಬಳಕೆದಾರರ ಮೆಚ್ಚುಗೆಯನ್ನು ಪಡೆಯುವಲ್ಲಿ ಯಶಸ್ವಿಯಾದರೆ, ಅದು ಕಾಲಕ್ರಮೇಣ ಬಳಕೆದಾರನ ಸಂಗಾತಿಯಾಗುತ್ತದೆ. ಅದರಲ್ಲೂ ಅದು ಬಳಕೆದಾರರ ದಿನನಿತ್ಯದ ಬದುಕಿಗೆ ಆಸರೆಯಾಗಿ ಜತೆಗೆ ಮನರಂಜನೆಯನ್ನೂ ನೀಡುತ್ತಿದ್ದರೆ, ತ್ವರಿತವಾಗಿ ಅದರ ಬಳಕೆಯು ಹವ್ಯಾಸವಾಗಿ, ಕೊನೆಗೊಮ್ಮೆ ಅರೆಕ್ಷಣವೂ ಬಿಟ್ಟಿರಲಾರದ ಸಂಗಾತಿಯಾಗಿ ಮಾರ್ಪಡುತ್ತದೆ.

ಟ್ರಾನ್ಸಿಸ್ಟರ್, ಪಾಕೆಟ್ ರೇಡಿಯೋ, ಗ್ರಾಮಾಫೋನ್, ಟು-ಇನ್-ಒನ್ ಟೇಪ್ ರೆಕಾರ್ಡರ್, ವಿಸಿಆರ್ ಮುಂತಾದ ಸಾಧನಗಳು ಕಳೆದ 5 ದಶಕಗಳಲ್ಲಿ ಮಾಡಿದ ಹಾವಳಿಯು ಇನ್ನೂ ನೆನಪಿನಾಳದಲ್ಲಿದೆ. ಈ ಸಾಲಿಗೆ ಇತ್ತೀಚಿನ ಸೇರ್ಪಡೆ ಮೊಬೈಲ್ ಫೋನ್, ಇನ್ನೂ ಸ್ಪಷ್ಟವಾಗಿ ಹೇಳುವುದಿದ್ದರೆ ಸ್ಮಾರ್ಟ್‌ಫೋನ್.

ಇವು ಸಾಮಾಜಿಕ ಜಾಲತಾಣಗಳ ವಾಹಕಗಳು. ರೈತ ಮಕ್ಕಳು ನೇಗಿಲತುದಿಗೆ ಟ್ರಾನ್ಸಿಸ್ಟರ್ ಅನ್ನು ನೇತು ಹಾಕಿಕೊಂಡು ಹೊಲವನ್ನು ಉಳುತ್ತಿರಲಿಲ್ಲವೇ? ವಿದ್ಯಾರ್ಥಿಗಳು ತರಗತಿಯ ಕೊನೆಯ ಬೆಂಚಿನಲ್ಲಿ ಕುಳಿತು ಕ್ರಿಕೆಟ್ ಕಾಮೆಂಟರಿಯನ್ನು ಕೇಳುತ್ತಿರಲಿಲ್ಲವೇ? ಆಕಾಶ ವಾಣಿಯವರು ಶುಭರಾತ್ರಿ ಹೇಳಿ ಮನೆಗೆ ತೆರಳುವ ತಡರಾತ್ರಿಯವರೆಗೆ ರೇಡಿಯೋಗೇ ಅಂಟಿಕೊಂಡಿರುತ್ತಿದ್ದ ಮಹಾನುಭಾವರನ್ನು ನೀವು ನೋಡಿಲ್ಲವೇ? ಅಷ್ಟೇಕೆ, ಟಿವಿ ಧಾರಾವಾಹಿಗಳು ಮಹಿಳೆಯರ ಬದುಕಿನ ವೈಖರಿಯನ್ನೇ ಬದಲಿಸಿದ, ಮೂವಿ-ಮ್ಯೂಸಿಕ್-ಕ್ರೀಡಾ ಚಾನೆಲ್‌ಗಳು ವಿದ್ಯಾರ್ಥಿಗಳ ಮತ್ತು ಯುವಜನರ ಬದುಕಿನ ಅಮೂಲ್ಯ ಸಮಯವನ್ನೇ ಕೊಳ್ಳೆ ಹೊಡೆದ ನಿದರ್ಶನಗಳನ್ನು ಬಿಡಿಸಿ ಹೇಳಬೇಕಾಗಿಲ್ಲ.

ಆದರೆ, ಈ ಸ್ಮಾರ್ಟ್‌ಫೋನ್‌ಗಳು ಅಥವಾ ಸಾಮಾಜಿಕ ಜಾಲತಾಣಗಳ ವೀಕ್ಷಣೆಯು ಸೃಷ್ಟಿಸಿರುವಷ್ಟು ಸಮಸ್ಯೆಯನ್ನು, ಉಂಟುಮಾಡಿರುವ ಕೌಟುಂಬಿಕ ಕ್ಷೋಭೆ, ರಾದ್ಧಾಂತ ಮತ್ತು ಸಾಮಾಜಿಕ ವ್ಯಾಕುಲತೆಯನ್ನು ಮೇಲೆ ವಿವರಿಸಲಾಗಿರುವ ಮಿಕ್ಕಾವ ಸಾಧನ-ಸಂದರ್ಭಗಳೂ ಸೃಷ್ಟಿಸಿರಲಿಲ್ಲ ಎಂಬುದಂತೂ ನಿಜ.

ಯಾವುದೇ ಆವಿಷ್ಕಾರ ಅಥವಾ ಸಾಧನವನ್ನು ಅವಶ್ಯಕತೆಗೆ ಅನುಗುಣವಾಗಿ ಒಂದು ಮಿತಿಯಲ್ಲಿ ಹಾಗೂ ಸದುದ್ದೇಶಕ್ಕೆ ಬಳಸಿದರೆ ಸಮಸ್ಯೆಯೇನೂ ಇರುವುದಿಲ್ಲ. ಇಂಥ ಆವಿಷ್ಕಾರ ಅಥವಾ ಸಾಧನಗಳನ್ನು ಅನಾವರಣಗೊಳಿಸುವಾಗ ಅದರ ಹಿಂದೆ ಒಂದು ಘನ ಉದ್ದೇಶ ಇರುತ್ತದೆ. ಆದರೆ, ಸದುದ್ದೇಶಗಳು ಮೂಲೆಗುಂಪಾಗಿ ದುರುದ್ದೇಶಗಳು ಮುನ್ನೆಲೆಗೆ ಬಂದು ಆಟವಾಡಲು ಶುರುಹಚ್ಚಿಕೊಂಡಾಗ, ಅವಾಂತರಗಳು ಸಂಭವಿಸುತ್ತವೆ. ಈಗ ನಡೆದಿರುವುದೂ ಅದೇ!



ಬೇಸಿಕ್ ಮೊಬೈಲ್ ಫೋನುಗಳು ದಾಂಗುಡಿಯಿಟ್ಟಾಗ ತ್ವರಿತ ಸಂಪರ್ಕ ಎಂಬುದು ಅದರ ಮೂಲ ಉದ್ದೇಶವಾಗಿತ್ತು. ಕಾಲಕ್ರಮೇಣ ಅದರ ಮೂಲಕ ಸಂದೇಶವನ್ನು ಕಳಿಸುವುದು, ಫೋಟೋಗಳನ್ನು ಕ್ಲಿಕ್ಕಿಸುವುದು ಮತ್ತು ಇನ್ನೊಬ್ಬರಿಗೆ ರವಾನಿಸುವುದು ಶುರುವಾದವು.

ಸ್ಮಾರ್ಟ್‌ಫೋನ್‌ಗಳ ಆಗಮನವಾಗುತ್ತಿದ್ದಂತೆ ಬಳಕೆಯ ವ್ಯಾಪ್ತಿಯೂ ವಿಸ್ತರಿಸಿಕೊಂಡು ಧಾರಾವಾಹಿಗಳು, ಸುದ್ದಿಗಳನ್ನು ವೀಕ್ಷಿಸುವ ಪರಿಪಾಠ ಈ ಫೋನುಗಳೆಡೆಗೆ ತಿರುಗಿ ಕೊಂಡಿತು. ಸಾಲದೆಂಬಂತೆ, ಚಲನಚಿತ್ರ, ಚಿತ್ರಗೀತೆ, ಭಾಷಣಗಳ ವೀಕ್ಷಣೆ, ಸಂಗೀತವನ್ನು ಆಲಿಸುವಿಕೆ, ವಿಭಿನ್ನ ಅಂತರ್ಜಾಲ ವೇದಿಕೆಗಳಲ್ಲಿ ಮಾಹಿತಿಗಳನ್ನು ತಡಕಾಡುವಿಕೆ ಮುಂತಾದ ಅಭ್ಯಾಸಗಳು ಶುರುವಾದವು. ಒಟ್ಟಿನಲ್ಲಿ, ಅಂಗೈಯಲ್ಲೇ ಜಗತ್ತನ್ನು ತುಂಬಿಸಿ ಬಿಡುವ ಆಧುನಿಕ ಸರ್ವಜ್ಞ ಎಂಬ ಅಭಿದಾನವನ್ನು ಪಡೆದುಕೊಂಡು ಬಿಟ್ಟಿತು ಸ್ಮಾರ್ಟ್ ಫೋನು. ಹೀಗೆ ನಿತ್ಯಬದುಕಿಗೆ ಬೆರಳ ತುದಿಯಲ್ಲಿನ ಕೈಪಿಡಿಯಾಗಿರುವ ಸ್ಮಾರ್ಟ್ ಫೋನುಗಳು ವಿದ್ಯಾರ್ಥಿಗಳ ಕಿಸೆಯನ್ನೇ ಸೇರಿರುವುದರಲ್ಲಿ ಅಚ್ಚರಿಯೇನಿಲ್ಲ!

ಅದರಲ್ಲೂ ನಿರ್ದಿಷ್ಟವಾಗಿ ಕೋವಿಡ್ ಮಹಾಮಾರಿ ಅಪ್ಪಳಿಸಿದ ಸಂದರ್ಭದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯಲ್ಲಿ ತರಗತಿಯ ನಿಯತ ಪಾಠವು ದುಸ್ತರವಾದಾಗ ಮತ್ತು ಅದಕ್ಕೆ ಪರಿಹಾರೋಪಾಯ ಎಂಬಂತೆ ಆನ್‌ಲೈನ್ ಪಾಠದ ವ್ಯವಸ್ಥೆ ಮುನ್ನೆಲೆಗೆ ಬಂದಾಗ, ಬಡವ-ಬಲ್ಲಿದ ಎನ್ನದೆ ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲೂ ಸ್ಮಾರ್ಟ್‌ಫೋನ್



ವಿಜೃಂಭಿಸುವಂತಾಯಿತು.

ಆದರೆ, ಒಂದು ಘನ ಉದ್ದೇಶಕ್ಕಾಗಿ ಜಾರಿಗೆ ತಂದ ವ್ಯವಸ್ಥೆಯೊಂದು, ವಿದ್ಯಾರ್ಥಿಗಳು ತಮ್ಮ ಪ್ರಧಾನ ಚಟುವಟಿಕೆಗಳನ್ನೇ ಕೈಬಿಟ್ಟು, ಮೊಬೈಲ್‌ನಲ್ಲೇ ಮುಳುಗಿ ಬಿಡುವಂಥ ಪರಿಸ್ಥಿತಿಯನ್ನು ಹುಟ್ಟುಹಾಕಿದ್ದು ವಿಪರ್ಯಾಸ! ಹೀಗೆ ಸ್ಮಾರ್ಟ್ ಫೋನ್‌ಗಳ ದಾಸರಾಗಿರುವ ಮಕ್ಕಳ ಪಾಲಕರು/ಪೋಷಕರು ಈಗ ನಿದ್ರೆಗೆಡುವಂತಾಗಿದೆ.

ಕಾರಣ, ತಮ್ಮ ಮಕ್ಕಳ ವಿದ್ಯಾಭ್ಯಾಸ ಹಾಗೂ ಭವಿಷ್ಯದ ಬಗ್ಗೆ ಅವರು ಚಿಂತಾಕ್ರಾಂತ ರಾಗುವಂತಾಗಿದೆ. ಕೆಲವೇ ವರ್ಷಗಳ ಹಿಂದೆ, ನಮ್ಮ ಮಕ್ಕಳು ಬರೀ ಕ್ರಿಕೆಟ್ ಆಡುತ್ತಾರೆ, ಟಿವಿ ನೋಡುತ್ತಾರೆ, ಹೊರಗಡೆ ಸುತ್ತಾಡುತ್ತಾರೆಯೇ ಹೊರತು ಪಠ್ಯಪುಸ್ತಕದ ಓದಿನ ಕಡೆಗೆ ಅವರಿಗೆ ಗಮನವಿಲ್ಲ, ಶ್ರದ್ಧೆಯೂ ಇಲ್ಲ ಎನ್ನುತ್ತಿದ್ದ ಪೋಷಕರು ಈಗ, ನಮ್ಮ ಮಕ್ಕಳು ಮೊಬೈಲ್ ಫೋನಿನ ಗುಂಗಿನಿಂದ ಹೊರಗೇ ಬರುತ್ತಿಲ್ಲ ಎಂದು ಅವರಿವರ ಬಳಿ ಅಳಲನ್ನು ತೋಡಿಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ.

ಇದು ಒಬ್ಬಿಬ್ಬರ ಅಳಲು ಅಲ್ಲ, ಬದಲಿಗೆ ಮನೆಮನೆಯ ಕಥೆ! ಶಾಲಾ ಮಕ್ಕಳ ಸ್ಮಾರ್ಟ್ ಫೋನ್ ಅಡಿಕ್ಷನ್ ಅದೆಷ್ಟು ತೀವ್ರವಾಗಿದೆಯೆಂದರೆ, ಹೆತ್ತವರು ಮೊಬೈಲ್ ಫೋನನ್ನು ಕೊಡಿಸಿಲ್ಲ ಎಂಬ ಕಾರಣಕ್ಕೆ ಜೀವಕ್ಕೇ ಆಪಾಯ ಉಂಟು ಮಾಡಿಕೊಳ್ಳುವವರೆಗೂ ತಲುಪಿದ ಮಕ್ಕಳಿದ್ದಾರೆ.

ಇದು ನಿಜಕ್ಕೂ ದುರಂತವೇ ಸರಿ. ಮಕ್ಕಳ ಹೆಚ್ಚುವರಿ ಶಿಕ್ಷಣ/ಟ್ಯೂಷನ್ ಸೇರಿದಂತೆ ವಿವಿಧ ಬಾಬತ್ತುಗಳಿಗೆ ಮತ್ತು ಕಾರ್ಯಕ್ಷೇತ್ರದ ವಿಭಿನ್ನ ಅವಶ್ಯಕತೆಗಳಿಗೆ ತಂತ್ರಜ್ಞಾನದ ಅವಲಂಬನೆಯೇ ಮುಖ್ಯವಾಗಿರುವ ಇಂದಿನ ದೈನಂದಿನ ಬದುಕಿನಲ್ಲಿ ಸ್ಮಾರ್ಟ್‌ಫೋನಿನ ಅನಿವಾರ್ಯತೆ ಪ್ರಶ್ನಾತೀತ. ಆದರೆ, ಮಕ್ಕಳು ಸ್ಮಾರ್ಟ್‌ಫೋನಿನಲ್ಲೇ ಮುಳುಗಿ ಹೋಗಿ, ಮಿತಿಮೀರಿ ಸ್ಕ್ರೀನ್‌ಟೈಮ್ ಅನ್ನು ಬಳಕೆ ಮಾಡುವುದು ಅವರ ಕಲಿಕಾ ಆಸಕ್ತಿಗೆ ಮತ್ತು ಏಕಾಗ್ರತೆಗೆ ಧಕ್ಕೆಯುಂಟು ಮಾಡುತ್ತದೆ.

ತನ್ಮೂಲಕ ಅವರ ಶೈಕ್ಷಣಿಕ ಪ್ರಗತಿಗೆ ಮಾರಕವಾಗುತ್ತದೆ. ಹೀಗಾಗಿ, ಮಕ್ಕಳ ಶೈಕ್ಷಣಿಕ ಬದುಕು, ಭವಿಷ್ಯ, ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರಕಾರವು ಕೊಂಚ ವಿಳಂಬವಾದರೂ ಶ್ಲಾಘನೀಯ ಕ್ರಮವನ್ನು ಕೈಗೊಳ್ಳುತ್ತಿದೆ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

ಬಹುತೇಕ ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಬಳಕೆಗೆ ನಿರ್ಬಂಧವಿದ್ದರೂ, ಅದೊಂದು ರೀತಿಯಲ್ಲಿ ಕಪ್ಪೆಯನ್ನು ಹಿಡಿದು ಕೊಳಗಕ್ಕೆ ತುಂಬಿದಂತಾಗಿದ್ದು ಪರಿಣಾಮಕಾರಿಯಾಗಿಲ್ಲ ಎನ್ನುತ್ತಾರೆ ಹಲವರು.

ಸ್ಮಾರ್ಟ್ ಫೋನುಗಳನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ತೆರೆದು ನೋಡುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದ್ದರೆ, ಸಾಮಾಜಿಕ ಜಾಲತಾಣಗಳನ್ನು ಜಾಲಾಡಲು ಬಳಸುವವರ ಸಂಖ್ಯೆಯೇ ಹೆಚ್ಚಿರುವಂತಿದೆ. ವರದಿಯೊಂದರ ಪ್ರಕಾರ ಭಾರತದಲ್ಲಿ 16 ವರ್ಷದೊಳಗಿನ ವಿದ್ಯಾರ್ಥಿಗಳು ದಿನಾಲೂ ಸರಾಸರಿ 4 ಗಂಟೆಗಿಂತ ಹೆಚ್ಚು ಕಾಲ ಸ್ಮಾರ್ಟ್‌ಫೋನ್ ವೀಕ್ಷಣೆಯಲ್ಲಿ ಮುಳುಗಿರುತ್ತಾರಂತೆ; ಈ ವೀಕ್ಷಣೆಯಲ್ಲಿ ವಿಡಿಯೋ, ರೀಲ್ಸ್, ಗೇಮಿಂಗ್, ಸಿನಿಮಾಗಳು ಮತ್ತು ಕ್ರೀಡಾ ವಿಡಿಯೋಗಳು ಇರುತ್ತವೆಯಂತೆ.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಯನದ ಪ್ರಕಾರ, 10ರ ವಯೋಮಾನದ ಮಕ್ಕಳಲ್ಲಿ ಶೇ.37.08ರಷ್ಟು ಮಂದಿ ಫೇಸ್ ಬುಕ್ ಖಾತೆಯನ್ನೂ, ಶೇ.24.30ರಷ್ಟು ಮಕ್ಕಳು ಇನ್‌ಸ್ಟಾಗ್ರಾಂ ಖಾತೆಯನ್ನೂ ಹೊಂದಿದ್ದಾರಂತೆ! ಗಾಬರಿಗೊಳಿಸುವ ಈ ಅಂಕಿ-ಅಂಶಗಳೇ ಸರಕಾರವು ಮಕ್ಕಳ ಮೊಬೈಲ್ ಬಳಕೆಗೆ ಅಂಕುಶ ಹಾಕುವ ನಿಟ್ಟಿನಲ್ಲಿ ಪ್ರೇರೇಪಿಸಿರಬೇಕು ಎನ್ನಲಾಗುತ್ತದೆ.

16 ವರ್ಷದೊಳಗಿನ ಮಕ್ಕಳು ಸ್ಮಾರ್ಟ್‌ಫೋನ್ ಬಳಸುವುದನ್ನು ಸರಕಾರವು ನಿಷೇಧಿಸುತ್ತದೆಯೋ ಅಥವಾ ನಿಯಂತ್ರಿಸುತ್ತದೆಯೋ ಎಂಬ ವಿಚಾರದಲ್ಲಿ ಗೊಂದಲವಿದೆ. ಮಕ್ಕಳ ಓದಿಗೆ ಇರುವ ಅಡ್ಡಿಯನ್ನು ತಪ್ಪಿಸಲು, ಅವರ ಗಮನವು ಬೇರೆಡೆಗೆ ತಿರುಗದಂತೆ ಮಾಡಲು ಇಂಥ ಯಾವುದಾದರೊಂದು ಕ್ರಮದ ಅಗತ್ಯವಿದೆ ಎಂಬುದೇನೋ ಖರೆ.

ಸೈಬರ್ ಬುಲ್ಲಿಯಿಂಗ್ ಅನ್ನು ಪರಿಶೀಲಿಸಲು, ಅಪರಿಚಿತ ವ್ಯಕ್ತಿಗಳ ಸಂಪರ್ಕವನ್ನು ತಡೆಯಲು, ಸೈಬರ್ ಅಪರಾಧಗಳನ್ನು ತಪ್ಪಿಸಲು, ವ್ಯಸನಗಳಿಂದ ದೂರವಿರಿಸಲು, ಮಕ್ಕಳ ವಯೋಸಹಜ ಶಿಸ್ತನ್ನು ಕಾಪಾಡಲು, ತಡರಾತ್ರಿಯವರೆಗಿನ ಸ್ಮಾರ್ಟ್‌ಫೋನ್ ವೀಕ್ಷಣೆಯಿಂದ ಮಕ್ಕಳಲ್ಲಿ ಉಂಟಾಗುತ್ತಿರುವ ನಿದ್ರಾಹೀನತೆಯನ್ನು ತಪ್ಪಿಸಲು ಇಂಥ ನಿಯಂತ್ರಣ ಅಥವಾ ನಿಷೇಧದ ಅಗತ್ಯವಿದೆ ಎನ್ನಲಾಗುತ್ತದೆ.

ಅಷ್ಟೇಕೆ, ಮಕ್ಕಳು ಸಾಮಾಜಿಕ ವ್ಯವಸ್ಥೆಯಲ್ಲಿ ಜನರೊಂದಿಗಿನ ನೇರಭೇಟಿ ಮತ್ತು ಸಂಭಾಷಣೆಗೆ ಒಡ್ಡಿಕೊಳ್ಳುವ ಪರಿಪಾಠವೇ ಕುಸಿಯುತ್ತಿದ್ದು, ಇದನ್ನು ತಪ್ಪಿಸಲು ಮಕ್ಕಳ ಸ್ಮಾರ್ಟ್ ಫೋನ್ ಬಳಕೆಯನ್ನು ನಿಷೇಧಿಸುವುದು/ನಿಯಂತ್ರಿಸುವುದು ಅವಶ್ಯ ಎನ್ನುತ್ತಾರೆ ಬಲ್ಲವರು.

ಆದರೆ, ಹೀಗೆ ನಿಷೇಧಿಸಿದರೆ ತುರ್ತು ಸಂದರ್ಭದಲ್ಲಿ ಮಕ್ಕಳ ಜತೆಗಿನ ಸಂವಹನ ದುಸ್ತರವಾಗುತ್ತದೆ ಮತ್ತು ಅವರ ಆನ್‌ಲೈನ್ ಅಧ್ಯಯನಕ್ಕೆ ಅಡಚಣೆಯಾಗುತ್ತದೆ ಎಂಬ ಕಾರಣವನ್ನೂ ನೀಡುವವರಿದ್ದಾರೆ. ಜತೆಗೆ, ಸ್ಮಾರ್ಟ್‌ಫೋನ್‌ನಲ್ಲಿ ಗೂಗಲ್ ಮೂಲಕ ಹರಿದು ಬರುವ ಜ್ಞಾನಗಂಗೆಯನ್ನು ನಿಲ್ಲಿಸುವುದು ಸರಿಯಲ್ಲ ಎಂಬ ಅಭಿಪ್ರಾಯವೂ ಇದೆ.

ನಮ್ಮ ದೇಶದಲ್ಲಿ ಹೆಂಡ-ಸಾರಾಯಿ, ಗುಟ್ಕಾ, ಬೀಡಿ-ಸಿಗರೇಟು ಮುಂತಾದವುಗಳ ಸೇವನೆ, ಪ್ಲಾಸ್ಟಿಕ್, ವರದಕ್ಷಿಣೆ, ಲಂಚ ಮುಂತಾದ ಅಪಸವ್ಯಗಳಿಗೆ ಹೇರಲಾದ ನಿರ್ಬಂಧ/ನಿಷೇಧ ಮತ್ತು ತರುವಾಯದಲ್ಲಿ ಅದಕ್ಕೆ ಒದಗಿರುವ ಸ್ಥಿತಿಯನ್ನು ನೋಡಿದವರು, ಸ್ಮಾರ್ಟ್ ಫೋನ್ ನಿಷೇಧ/ನಿಯಂತ್ರಣವೂ ಅದೇ ಹಾದಿಯನ್ನು ಹಿಡಿಯಬಹುದು ಎಂದು ಸಂದೇಹಿಸುತ್ತಾರೆ. ಅದಕ್ಕೂ ಮಿಗಿಲಾಗಿ, ಮೂಲಭೂತ ಹಕ್ಕುಗಳ ರಕ್ಷಕರು, ಇಂಥ ನಿಷೇಧದಿಂದ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ ಎಂದು ಹೇಳಿ ಕೋರ್ಟ್ ಮೆಟ್ಟಿಲು ಹತ್ತುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು.

ಇದರ ಬದಲಿಗೆ ನಿಯಂತ್ರಿತ ಬಳಕೆಯನ್ನು ಕೆಲವರು ಪ್ರತಿಪಾದಿಸುತ್ತಾರೆ. ಮಕ್ಕಳಿಗೆಂದೇ ವಿನ್ಯಾಸಗೊಳಿಸಿದ ಸ್ಮಾರ್ಟ್‌ಫೋನ್‌ಗಳು ಬರಲಿ, ಮಕ್ಕಳಿಗೆ ಅಪಾಯಕಾರಿ ಆಗಬಹುದಾದ ಕಂಟೆಂಟ್ ಅವುಗಳಲ್ಲಿದ್ದರೆ ಅವನ್ನು ತೆಗೆಯಲಿ, ತರಗತಿಯು ನಡೆಯುವ ಸಮಯದಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸಲಿ ಹೀಗೆ ಬಗೆಬಗೆಯ ಅಭಿಪ್ರಾಯಗಳು ಹೊರ ಹೊಮ್ಮುತ್ತಿವೆ ಸಮಾಜದ ವಿವಿಧ ಜನರಿಂದ.

ಹಾಗೆಯೇ, ಕೇವಲ ಒಂದು ಆದೇಶದ ಮೂಲಕವೇ ಮಕ್ಕಳ ಸ್ಮಾರ್ಟ್‌ಫೋನ್ ಬಳಕೆಯ ಮೇಲೆ ನಿಷೇಧ/ನಿಯಂತ್ರಣವನ್ನು ಹೇರಲಾಗದು; ಅದಕ್ಕೂ ಮುಂಚೆ ಸರಕಾರವು ಶಿಕ್ಷಕರು, ಶಿಕ್ಷಣ ತಜ್ಞರು, ಪೋಷಕರು, ಮನೋವಿಜ್ಞಾನಿಗಳು, ವೈದ್ಯರು, ಬುದ್ಧಿಜೀವಿಗಳು, ಪತ್ರಕರ್ತರನ್ನು ಒಳಗೊಂಡ ತಂಡದೊಡನೆ ವಿಸ್ತೃತ ಚಿಂತನೆಯನ್ನು ಮಾಡಬೇಕಾಗುತ್ತದೆ ಹಾಗೂ ಸ್ಮಾರ್ಟ್‌ಫೋನ್ ತಯಾರಕ ಕಂಪನಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಈ ಕಂಪನಿಗಳು ಯಾವುದಾದರೊಂದು ಕಾನೂನಿನ ಅಡಿಯಲ್ಲಿ ಇಂಥ ಕ್ರಮವನ್ನು ವಿರೋಧಿಸಬಹುದು. ದೂರಸಂಪರ್ಕ ಇಲಾಖೆಯು ಕೇಂದ್ರ ಸರಕಾರದ ಸುಪರ್ದಿಯಲ್ಲಿ ಇರುವುದರಿಂದ, ರಾಜ್ಯ ಸರಕಾರವು ಮಕ್ಕಳ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸುವ/ನಿಯಂತ್ರಿಸುವ ಕಾನೂನನ್ನು ಮಾಡಬಹುದೇ? ಎಂಬ ಜಿಜ್ಞಾಸೆಯೂ ಇಲ್ಲಿ ತಲೆದೋರುತ್ತದೆ.

ಈ ಮಹತ್ವದ ಹೆಜ್ಜೆಯ ಸಾಧ್ಯಾಸಾಧ್ಯತೆಗಳೇನೇ ಇರಲಿ, ಅನುಭವ ಮತ್ತು ಪ್ರಚಲಿತ ಚಿಂತನೆಯ ಆಧಾರದ ಮೇಲೆ ಹೇಳುವುದಾದರೆ, ಇಂಥ ನಿಷೇಧ/ನಿಯಂತ್ರಣಗಳು ಕೇವಲ ಕಾನೂನಿನಿಂದ ಮತ್ತು ಸರಕಾರಿ ಆದೇಶಗಳಿಂದ ಕೈಗೂಡುವುದು ಕೊಂಚ ಕಷ್ಟವೇ. ಹೀಗಾಗಿ, ಇಂಥ ಕ್ರಮದ ಜತೆಜತೆಗೆ, ತಮ್ಮ ಮಕ್ಕಳ ಮೊಬೈಲ್ ಬಳಕೆಯ ವಿಷಯದಲ್ಲಿ ಪೋಷಕರು ಕೂಡ ಒಂದಿಷ್ಟು ಕಟ್ಟುಪಾಡುಗಳನ್ನು ವಿಧಿಸುವುದು, ಸಮಸ್ಯೆಯನ್ನು ಅವರಿಗೆ ಮನವರಿಕೆ ಮಾಡಿಕೊಡುವುದು ಪೂರಕ ಕ್ರಮವಾಗಬಲ್ಲದು ಎನ್ನಲಾಗುತ್ತಿದೆ.

- **ರಮಾನಂದ** ಶರ್ಮಾ

# ಪೌರ ಕಾರ್ಮಿಕರಿಗೆ ಶೀಘ್ರವೇ ಮನೆಗಳ ಹಸ್ತಾಂತರಿಸಿ

## ಊರಿನ ಸ್ವಚ್ಛತೆ ಮಾಡುವವರ ಶಾಪ ತಟ್ಟುವ ಮೊದಲೇ ಕಾಮಗಾರಿ ಪೂರ್ಣಗೊಳಿಸಿ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಊರಿನ ಸ್ವಚ್ಛತೆ ಮಾಡುವವರ ಶಾಪ ನಮಗೆ ತಟ್ಟುವ ಮೊದಲೇ ಅವರ ಮನೆಗಳ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ಹಸ್ತಾಂತರ ಮಾಡಬೇಕು ಎಂದು ಕೊಳಚಿ ನಿರ್ಮೂಲನ ಮಂಡಳಿ ಅಧಿಕಾರಿಗಳಿಗೆ ಕಠಿಣ ಸೂಚನೆಯನ್ನು ಶಾಸಕ ಸಿಮೆಂಟ್ ಮಂಜು ನೀಡಿದರು.



ಪಟ್ಟಣದ ಪುರಸಭಾ ಸಭಾಂಗಣದಲ್ಲಿ ಕೊಳಚಿ ನಿರ್ಮೂಲನ ಮಂಡಳಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಕಲೇಶಪುರ ಪುರಸಭಾ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರಿಗಾಗಿ ನಿರ್ಮಿಸಲಾಗುತ್ತಿರುವ ಮನೆಗಳ ಕಾಮಗಾರಿ ಕಳೆದ ಎಂಟು ವರ್ಷಗಳಿಂದ ನಿಧಾನಗತಿಯಲ್ಲಿ ಸಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದರು.

ಕೊಳಚಿ ನಿರ್ಮೂಲನ ಮಂಡಳಿ ವತಿಯಿಂದ ಸುಮಾರು 120 ಮನೆಗಳ ನಿರ್ಮಾಣ ಕಾಮಗಾರಿ ಆರಂಭಗೊಂಡಿದ್ದು, ಎಂಟು ವರ್ಷವಾದರೂ ಇನ್ನೂ ಪೂರ್ಣಗೊಂಡಿಲ್ಲ. ಪೌರ ಕಾರ್ಮಿಕರು ತಾತ್ಕಾಲಿಕವಾಗಿ ಟಾರ್ಪಲ್ ಹಾಕಿಕೊಂಡು ದುಸ್ಥಿತಿಯಲ್ಲಿ ವಾಸಿಸುತ್ತಿರುವುದನ್ನು ನಾನು ಹಲವು ಬಾರಿ ಗಮನಿಸಿದ್ದೇನೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಈಗಾಗಲೇ ಎರಡು-ಮೂರು ಬಾರಿ ಸಭೆ ನಡೆಸಿದ್ದರೂ ಕಾಮಗಾರಿ ವೇಗ ಪಡೆದುಕೊಂಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದಾಗ 19 ಮನೆಗಳು ಫೌಂಡೇಶನ್ ಹಂತದಲ್ಲಿ, 36 ಮನೆಗಳು ರೂಫಿಂಗ್ ಹಂತದಲ್ಲಿ ಮತ್ತು 65 ಮನೆಗಳು ಆರ್‌ಸಿಸಿ ಪೂರ್ಣಗೊಂಡು ಫಿನಿಶಿಂಗ್ ಹಂತದಲ್ಲಿವೆ ಎಂಬುದು ತಿಳಿದು ಬಂದಿದೆ. ಫಿನಿಶಿಂಗ್ ಹಂತದಲ್ಲಿರುವ 65 ಮನೆಗಳನ್ನು ಮೊದಲ ಆದ್ಯತೆಯಾಗಿ ಪೂರ್ಣಗೊಳಿಸಿ ಪೌರಕಾರ್ಮಿಕರಿಗೆ ಹಸ್ತಾಂತರ ಮಾಡಬೇಕು, ಇದರಿಂದ ಅವರು ಟಾರ್ಪಲ್‌ನಲ್ಲಿ ವಾಸಿಸುವ ದುಸ್ಥಿತಿಯಿಂದ ಮುಕ್ತಿ ಪಡೆಯಲು ಸಾಧ್ಯವಾಗುತ್ತದೆ ಎಂದು ಅವರು ಸೂಚಿಸಿದರು.

ಸಕಲೇಶಪುರದಲ್ಲಿ ಹೆಚ್ಚಿನ ಮಳೆಯಾಗುವ ಹಿನ್ನೆಲೆಯಲ್ಲಿ ಟಾರ್ಪಲ್ ಕಟ್ಟಿಕೊಂಡು ವಾಸಿಸುವುದು ತುಂಬಾ ಕಷ್ಟಕರ. ಆದ್ದರಿಂದ ಗುತ್ತಿಗೆದಾರರು ತಕ್ಷಣವೇ ಕಾಮಗಾರಿ ಆರಂಭಿಸಬೇಕು. ಸರ್ಕಾರದಿಂದ ಬಾಕಿ ಇರುವ ಹಣ ಬಿಡುಗಡೆಯಾಗಬೇಕಾದರೆ ನಾನು ಸ್ವತಃ ಸಚಿವರೊಂದಿಗೆ ಮಾತನಾಡಿ ಬಿಡುಗಡೆ ಮಾಡಿಸುವ ಪ್ರಯತ್ನ ಮಾಡುತ್ತೇನೆ ಎಂದು ಅವರು ಭರವಸೆ ನೀಡಿದರು.

ಈ ಕುರಿತು ಕೊಳಚಿ ನಿರ್ಮೂಲನ ಮಂಡಳಿಯ ಮುಖ್ಯ ಇಂಜಿನಿಯರ್‌ರೊಂದಿಗೆ ದೂರವಾಣಿ ಮೂಲಕವೂ ಮಾತನಾಡಿರುವುದಾಗಿ ತಿಳಿಸಿ, ಕಾಮಗಾರಿಗೆ ನಿಗದಿತ ಗಡುವು ನಿಗದಿ ಮಾಡಲಾಗಿದ್ದು, ಮುಂದಿನ ತಿಂಗಳೊಳಗೆ ಕೆಲಸಗಳನ್ನು ವೇಗಗೊಳಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ವಿಚಾರವನ್ನು ಈಗ ನಡೆಯುತ್ತಿರುವ ಅಧಿವೇಶನದಲ್ಲೂ ಸಚಿವರ ಗಮನಕ್ಕೆ ತಂದು, ಅಗತ್ಯವಾದರೆ ವಿಧಾನಸಭೆಯಲ್ಲೂ ಚರ್ಚೆ ಮಾಡಿ ಪೌರಕಾರ್ಮಿಕರ ಮನೆಗಳ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ಕೊಳಚಿ ನಿರ್ಮೂಲನ ಮಂಡಳಿಯ ಕಾರ್ಯನಿರ್ವಾಹಕ ಇಂಜಿನಿಯರ್ ಕುಮಾರ್ ಈಶ್ವರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮಹದೇವ್ ಇನ್ನಿತರ ಅಧಿಕಾರಿಗಳು ಇದ್ದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ: ಮೌನ ಮೆರವಣಿಗೆ

• ಪ್ರಜೋದಯ ವರದಿ

**ಅರಕಲಗೂಡು:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸದಸ್ಯರು ಕೈಯಲ್ಲಿ ಕ್ಯಾಂಡಲ್ ಹಿಡಿದು ಪಟ್ಟಣದಲ್ಲಿ ಮೌನ ಮೆರವಣಿಗೆ ನಡೆಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಒಕ್ಕೂಟದ ಗೌರವ ಅಧ್ಯಕ್ಷರಾದ ಡಾ. ಸಾವಿತ್ರಿ ಅವರು.ಇದೇ ಮೊದಲ ಬಾರಿಗೆ ಒಕ್ಕೂಟ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಾಸನದ ಕಲಾಭವನದಲ್ಲಿ ಮಾ.8ರಂದು ಬೃಹತ್ ಸಮಾವೇಶ ಆಯೋಜನೆ ಮಾಡಲಾಗಿದೆ.

ಈ ಸಲುವಾಗಿ ಇಡೀ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮಹಿಳೆಯರನ್ನು ಸಂಘಟಿಸಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ನ್ಯಾಯ ದಕ್ಕುವ ತನಕ ಹೋರಾಟವನ್ನು ಮುಂದುವರಿಸುವುದು ನಮ್ಮ ಮೂಲ ಆಶಯವಾಗಿದೆ. ಈ ಸಲುವಾಗಿ ಇಂದು ನೂರಕ್ಕೂ ಅಧಿಕ ಸಂಖ್ಯೆಯ ಮಹಿಳೆಯರು ಕಪ್ಪುಬಟ್ಟೆ ಧರಿಸಿ ಬೆಳಕಿನ ಮೆರವಣಿಗೆ ನಡೆಸಿದ್ದಾರೆ. ಅಲ್ಲದೆ ಮಾ.8ರಂದು ಹಮ್ಮಿಕೊಂಡಿರುವ ಮಹಿಳಾ ದಿನಾಚರಣೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಮಹಿಳೆಯರಲ್ಲಿನ ಪ್ರತಿಭೆಗೆ ಒತ್ತು ನೀಡುವ ಕೆಲಸ ಇನ್ನೂ ಹೆಚ್ಚು ಆಗಬೇಕಿದೆ. ಕೇವಲ ಮಹಿಳೆಯರು, ಹೆಣ್ಣುಮಕ್ಕಳು ಧರಿಸುವ ಬಟ್ಟೆಯಿಂದ ಅವರ ವ್ಯಕ್ತಿತ್ವವನ್ನು ಅವಲೋಕಿಸಬಾರದು. ಇದು ಕೂಡ ಒಂದು ರೀತಿಯಲ್ಲಿ ಶೋಷಣೆಯಾಗಿ ಕಂಡು ಬರುತ್ತದೆ. ಸಮಾಜದಲ್ಲಿ ಪುರುಷರಷ್ಟೇ ಮಹಿಳೆಯರಿಗೂ ಸರಿಸಮಾನವಾದ ಹಕ್ಕು,ಅವಕಾಶಗಳಿದ್ದು, ಇವುಗಳನ್ನು ಪಡೆದುಕೊಂಡು ಸ್ವಾವಲಂಬಿಗಳಾಗಿ ದೇಶದ ಅಭಿವೃದ್ಧಿಗೆ ಶ್ರಮಿಸಬೇಕೆಂಬುದೇ ಒಕ್ಕೂಟದ ಮೂಲ ಮಂತ್ರವಾಗಿದೆ ಎಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಅವರು ಮಾತನಾಡಿ, ನಿತ್ಯವೂ ಕೂಡ ನಾವು ಕೆಲಸ ಮಾಡುವ ಸ್ಥಳಗಳಲ್ಲಿಯೇ ಒಂದಲ್ಲಾ ಒಂದು ರೀತಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತದೆ. ಇದನ್ನು ವಿರೋಧಿಸುವ ನಿಟ್ಟಿನಲ್ಲಿ ಮಹಿಳೆಯರು ದಿಟ್ಟತನವನ್ನು ತೋರಿಸಬೇಕಿದೆ. ಉದಾಹರಣೆಗೆ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುವ ಆಶಾ ಕಾರ್ಯಕರ್ತರು, ಇತರೆ ಮಹಿಳಾ ಸಿಬ್ಬಂದಿಗಳು ಕರ್ತವ್ಯ ನಿಮಿತ್ತ ತೆರಳಿದ ವೇಳೆ ಪುರುಷರ ಅನಾವಶ್ಯಕ ಮಾತುಗಳಿಂದ ದೌರ್ಜನ್ಯ ನಡೆಯುತ್ತಿರುವುದು ಕಂಡು ಬಂದಿದೆ. ಈ ಸಂದರ್ಭದಲ್ಲಿ ಮಹಿಳೆಯರ ಕರ್ತವ್ಯಕ್ಕೆ ಬೆಲೆ ಕೊಡದೆ ಅವರ ಮೂಲ ಜಾತಿ, ಧರ್ಮವನ್ನು ಕಂಡುಕೊಂಡು ಸಲ್ಲದ ಮಾತುಗಳನ್ನು ಆಡುವುದು ಅಸಹಜತೆಯಿಂದ ಕೂಡಿದೆ. ಇಂತಹ ಘಟನೆಗಳನ್ನು ಮೆಟ್ಟಿ ನಿಂತು ಸೇವೆಯಲ್ಲಿ ತೊಡಗಬೇಕಿದೆ ಎಂದು ಸಲಹೆ ನೀಡಿದರು.

ಒಕ್ಕೂಟದ ಖಜಾಂಚಿ ಭಾನುಮತಿ, ಸದಸ್ಯರಾದ ಸಮುನ, ರಶ್ಮಿ, ಯಶೋಧಮ್ಮ, ಯಶಸ್ವಿನಿ ಇತರರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಕ್ಯಾಂಡಲ್ ಮೆರವಣಿಗೆಗೂ ಮುನ್ನಾ ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ಆವರಣದಲ್ಲಿ ವಿಚಾರಗೋಷ್ಠಿ ನಡೆಯಿತು. ಬಳಿಕ ಕ್ಯಾಂಡಲ್ ಹಿಡಿದು ಮೌನ ಮೆರವಣಿಗ ನಡೆಸಿದರು.

# ಮಾಹಿತಿ ಹಕ್ಕು ಕಾಯ್ದೆ ಪ್ರಜಾಪ್ರಭುತ್ವಕ್ಕೆ ಆಮ್ಲಜನಕ

» ಮೊದಲನೇ ಪುಟದಿಂದ

ಈಗ 130 ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ. ಸರ್ಕಾರದ ಯಾವುದೇ ನಿರ್ಣಯ ನೇರವಾಗಿ ಪ್ರಜೆಗಳ ಮೇಲೆ ಆಗಲಿದೆ. ಅನುಭವಿಸುವವರಿಗೆ ಸ್ವರೂಪ ತಿಳಿಯುವುದೇ ಮಾಹಿತಿ ಹಕ್ಕನಿಂದ ಎಂದರು.

ವಿದ್ಯಾರ್ಥಿಗಳಲ್ಲಿ ಪ್ರಶ್ನೆ, ಅನುಮಾನ ಇರಬೇಕು, ಹಿಂದೆ ಪತ್ರಿಕೋದ್ಯಮ ಕಷ್ಟ ಇತ್ತು. ಈಗ ತಂತ್ರಜ್ಞಾನದ ಕಾರಣಕ್ಕೆ ಸುಲಭವಾಗಿದೆ. ಆದರೂ ನಿರಂತರ ಅಧ್ಯಯನ, ಓದುವುದು ಕಲಿಯೋದು ನಿತ್ಯ ನಿರಂತರ, ಭ್ರಮಾಲೋಕ ಬೇಡ, ನಿರಂತರ ವಿದ್ಯಾರ್ಥಿಗಳು, ನಿತ್ಯ ಕಲಿಕೆ, ಭೂತಕಾಲದ ಅಧ್ಯಯನ ಬೇಕು, ಓದಿದರೆ ವೃತ್ತಿಗೆ ಗೌರವ ಬರಲಿದೆ ಹೇಳಿದರು.

### ಜನರ ಕೈಗೆ ಆರ್‌ಟಿಐ ಬ್ರಹ್ಮಾಸ್ತ್ರ

ಸರ್ಕಾರದ ನಿರ್ಧಾರಗಳು ಪಾರದರ್ಶಕವಾಗಿ, ಜನರಿಗೆ ಉತ್ತರದಾಯಿತ್ವ ಆಗಿರಬೇಕು. ಭ್ರಷ್ಟಾಚಾರ ಮುಕ್ತವಾಗಿರಬೇಕು ಎಂಬುದು ಮಾಹಿತಿ ಹಕ್ಕು ಉದ್ದೇಶ. ಜನರ ಕೈಗೆ ಇದೊಂದು ಬ್ರಹ್ಮಾಸ್ತ್ರ ಇದ್ದ ಹಾಗೆ. ಯಾರೇ ಆಗಲಿ ಅರ್ಜಿ ಹಾಕುವಾಗ ಸಾರ್ವಜನಿಕ ಹಿತ, ಪ್ರಾಮಾಣಿಕತೆ ಇರಲಿ, ನಾಡಿನ ಹಿತ ಜೊತೆಗೆ ಆಡಳಿತ ಸುಗಮವಾಗಿ ನಡೆಯಲು ಬಳಸಿ ಎಂದು ಕೆ.ಬದ್ರುದ್ದೀನ್ ಅವರು ಸಲಹೆ ನೀಡಿದರು.




ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ರುದ್ರಣ್ಣ ಹರ್ತಿಕೋಟೆ ಹಾಗು ಬದ್ರುದ್ದೀನ್ ಅವರಿಬ್ಬರೂ ಕರ್ನಾಟಕ ಪತ್ರಿಕೋದ್ಯಮದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆ. ವೃತ್ತಿಗೆ ಕಳಂಕ ತರದ ರೀತಿ, ಗೌರವಯುತವಾಗಿ ಕೆಲಸ ಮಾಡಿದ್ದಾರೆ. ಈಗ ಮಾಹಿತಿ ಆಯೋಗದ ಆಯುಕ್ತರಾಗಿದ್ದು, ಇದನ್ನು ನೋಡುವ ಸೌಭಾಗ್ಯ ನಮ್ಮದು. ಕನ್ನಡ ಪತ್ರಿಕೋದ್ಯಮ ಮತ್ತು ದೃಶ್ಯ ಮಾಧ್ಯಮದಲ್ಲಿ ಇವರಿಬ್ಬರದು ದೊಡ್ಡ ಹೆಸರು ಎಂದರು.

ಜೆ.ಆರ್.ಕೆ.ಕೆಂಚೇ ಗೌಡ ಅವರು ಅಧ್ಯಕ್ಷರಾದ ಮೇಲೆ ಸ್ಟಡೀ ವಿತ್ ಸರ್ಕಲ್, ಮಧ್ಯಾಹ್ನದ ದಾಸೋಹ ಸೇರಿ ವಿವಿಧ ಸಮಿತಿಗಳನ್ನು ರಚನೆ ಮಾಡುವ ಮೂಲಕ ವಿಭಿನ್ನ ಕಾರ್ಯಕ್ರಮ ಮಾಡುತ್ತಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಅಧ್ಯಕ್ಷತೆ ವಹಿಸಿದ್ದರು. ಸಾಂಸ್ಕೃತಿಕ ಸಮಿತಿ ಸಂಚಾಲಕ ಪ್ರಸನ್ನ ಕುಮಾರ್, ಸಾಂಸ್ಕೃತಿಕ ಸಮಿತಿ ಸದಸ್ಯ ಸಿ.ಆರ್.ನವೀನ್, ಹಿಂದೂ ಪ್ರಕಾಶ್, ಬಿ.ಆರ್.ಬೊಮ್ಮೇಗೌಡ ಇದ್ದರು.

# ಒತ್ತಡ ರಹಿತ ಜೀವನಕ್ಕೆ ಯೋಗ, ಧ್ಯಾನ ಸಹಕಾರಿ

## ಆರೋಗ್ಯಕ್ಕಾಗಿ ದಿನದ ಒಂದು ಗಂಟೆ ಮೀಸಲಿಡಿ: ಪ್ರಿಯದರ್ಶಿನಿ

• ಪ್ರಜೋದಯ ವರದಿ

**ಹಾಸನ:** ಮನಸ್ಸು ಸದಾ ಸಂತೋಷವಾಗಿರಬೇಕೆಂದರೆ ಯೋಗ, ಧ್ಯಾನ ಮತ್ತು ಆತ್ಮಶಾಂತಿ ಅತ್ಯವಶ್ಯಕವಾಗಿದೆ. ಆರೋಗ್ಯಕ್ಕಾಗಿ ದಿನದ ಒಂದು ಗಂಟೆ ಮೀಸಲಿಡಬೇಕೆಂದು ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಪ್ರತಿನಿಧಿ ಪ್ರಿಯದರ್ಶಿನಿ ಅವರು ಸಲಹೆ ನೀಡಿದರು.

ನಗರದ ಮಲೆನಾಡು ತಾಂತ್ರಿಕ ಕಾಲೇಜಿನಲ್ಲಿ ಆರ್ಟ್ ಆಫ್ ಲಿವಿಂಗ್ ಮತ್ತು ಹಾಸನ ಲಯನ್ಸ್ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಆನಂದ ಅನುಭೂತಿ ಶಿಬಿರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸಾಧು ಸಂತರು ಮಾನಸಿಕ ಶಾಂತಿ ಮತ್ತು ಸಂತೋಷಕ್ಕಾಗಿ ವಿವಿಧ ಆಧ್ಯಾತ್ಮಿಕ ಮಾರ್ಗಗಳನ್ನು ಅನುಸರಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಜನರು ಅತಿಯಾದ ಒತ್ತಡ ಮತ್ತು ಆತಂಕದಿಂದ ಜೀವನ ನಡೆಸುತ್ತಿರುವುದರಿಂದ ಸಂತೋಷ ಕಡಿಮೆಯಾಗುತ್ತಿದೆ. ಮಾನಸಿಕ ಸಂತೋಷವನ್ನು ಪುನಃ ಪಡೆಯುವ ಅಗತ್ಯವಿದೆಯೆಂದು ಹೇಳಿದರು.




ಯೋಗವು ದೇಹದ ಆರೋಗ್ಯವನ್ನು ಕಾಪಾಡಲು ಸಹಕಾರಿಯಾದರೆ ಧ್ಯಾನ ಮತ್ತು ಸುದರ್ಶನ ಕ್ರಿಯೆಯು ಮನಸ್ಸನ್ನು ಒತ್ತಡದಿಂದ ಮುಕ್ತಗೊಳಿಸಿ ರೋಗಮುಕ್ತ ದೇಹ ನೀಡುತ್ತದೆ. ಅವುಗಳ ಮೂಲಕ ಮಾನಸಿಕ ಆರೋಗ್ಯವೂ ಉತ್ತಮವಾಗಿರುತ್ತದೆಂದು ತಿಳಿಸಿದರು.

ಪ್ರತಿದಿನ ಹಲ್ಲುಜ್ಜುವುದು, ಸ್ನಾನ ಮಾಡುವಂತಹ ಸರಳ ದೈನಂದಿನ ಅಭ್ಯಾಸಗಳೂ ಮನಸ್ಸಿನ ಆರೋಗ್ಯಕ್ಕೆ ಸಹಕಾರಿಯಾಗುತ್ತವೆ. ಯಾವ ಕೆಲಸ ಮಾಡಿದರೂ ಅದನ್ನು ಸಕಾರಾತ್ಮಕ ಮನೋಭಾವದಿಂದ ಮಾಡಿದರೆ ನಮಗೆ ಹೊಸ ಶಕ್ತಿ ಮತ್ತು ಉತ್ಸಾಹ ಬರುತ್ತದೆ. ಮನಸ್ಸಿನ ರಕ್ಷಣೆಗೆ ಪ್ರತಿದಿನ ಸ್ವಲ್ಪ ಸಮಯ ಯೋಗ, ಧ್ಯಾನ ಮತ್ತು ಸತ್ಸಂಗದಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಚೌಡವಳ್ಳಿ ಅವರು ಮಾತನಾಡಿ, ಸಮಾಜದಲ್ಲಿ ಎಲ್ಲರೂ ಸಮಾನರು. ಯೋಗ ಮತ್ತು ಧ್ಯಾನವು ಮನುಷ್ಯನ ಆರೋಗ್ಯ ಹಾಗೂ ಮನಸ್ಸಿನ ಸಮತೋಲನ ಕಾಪಾಡಲು ಸಹಕಾರಿಯಾಗುತ್ತದೆ. ಈ ಶಿಬಿರವು ಎಲ್ಲರಿಗೂ ಉಪಯುಕ್ತವಾಗಿದ್ದು, ಹಾಸನ ಲಯನ್ಸ್ ಕ್ಲಬ್ ಕಾರ್ಯಕ್ರಮಕ್ಕೆ ಮಹತ್ವದ ಬೆಂಬಲ ನೀಡಿದೆ ಎಂದು ಅವರು ಹೇಳಿದರು.

ಲಯನ್ಸ್ ಕ್ಲಬ್ ಕಾರ್ಯದರ್ಶಿ ಸಿ.ಶಿವಸ್ವಾಮಿ ಅವರು ಮಾತನಾಡಿ, ಹಾಸನ ಲಯನ್ಸ್ ಸೇವಾ ಕೇಂದ್ರದಲ್ಲಿ ವಿವಿಧ ಸೇವಾ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಸಮಾಜದ ಒಳಿತಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಯೋಗ ಮತ್ತು ಧ್ಯಾನ ಶಿಬಿರವೂ ಅವುಗಳಲ್ಲಿ ಒಂದಾಗಿದೆ. ಇದು ಯಶಸ್ವಿಯಾಗಿ ನೆರವೇರಿರುವುದು ಸಂತೋಷದ ಸಂಗತಿ ಎಂದರು.

ನಗರಸಭೆ ನಿವೃತ್ತ ಆಯುಕ್ತ ಪರಮೇಶ್, ಆರ್ಟ್ ಆಫ್ ಲೀವಿಂಗ್ ಫೌಂಡೇಶನ್ ಶಿಕ್ಷಕ ಜಿ.ಎ. ಸುಬ್ಬುಕೃಷ್ಣ, ಹೆಚ್.ಎಲ್.ವಿದ್ಯಾ, ರೂಪ, ಶಿಕ್ಷಕಿ ಹೆಚ್.ವೇದಶ್ರೀ, ಪ್ರಿಯಾ, ಸಿಂಚನಾ, ಶಿಲ್ಪಾ, ಖಜಾಂಚಿ ಚನ್ನೇಗೌಡ, ವಲಯ ಅಧ್ಯಕ್ಷ ಹೆಚ್.ಕೆ.ನಾಗೇಶ್, ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಖಜಾಂಚಿ ಪಾರ್ಶ್ವನಾಥ್, ಮಲೆನಾಡು ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಮತ್ತಿತರರಿದ್ದರು.

## ಸೇವೆ ಶ್ಲಾಘನೀಯ

» ಒಂದನೇ ಪುಟದಿಂದ

ಸೆಸ್ಕ್ ಅಧೀಕ್ಷಕ ಇಂಜಿನಿಯರ್ ಗುಂಡಿನಕೇರಿ ಕೃಷ್ಣಪ್ಪ ಮಾತನಾಡಿ, ಲೈನ್ ಮ್ಯಾನ್‌ಗಳು ಸಾರ್ವಜನಿಕ ವಲಯದಲ್ಲಿ ಎಷ್ಟೇ ಒತ್ತಡವಿದ್ದರೂ ಸುರಕ್ಷತೆಯಿಂದ ಕರ್ತವ್ಯ ನಿರ್ವಹಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಸೆಸ್ಕ್ ಹಾಸನ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಜಿ.ಎಂ. ಅರ್ಜುನ್ ಮಾತನಾಡಿ, ಎಲ್ಲಾ ಪವರ್ ಮ್ಯಾನ್‌ಗಳು ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸಿ ಗ್ರಾಹಕರಿಗೆ ನಿರಂತರ ಸೇವೆ ಸಲ್ಲಿಸಬೇಕು. ತಮ್ಮ ಹಾಗು ಸಾರ್ವಜನಿಕರ ಸುರಕ್ಷತೆಗೆ ಒತ್ತು ನೀಡಬೇಕೆಂದರು. ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಉಪವಿದ್ಯುತ್ ಪರಿವೀಕ್ಷಕ ರವೀಶ್ ಅವರು ಪವರ್ ಮ್ಯಾನ್‌ಗಳಿಗೆ ಸುರಕ್ಷತೆ ಬಗ್ಗೆ ತಿಳಿಸಿಕೊಟ್ಟರು. ಸೆಸ್ಕ್ ಹಾಸನ ವಿಭಾಗದ ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು, ಲೆಕ್ಕಾಧಿಕಾರಿಗಳು, ಶಾಖಾಧಿಕಾರಿಗಳು, ಎಲ್ಲಾ ಸಂಘ ಸಂಸ್ಥೆಗಳ ಒಕ್ಕೂಟದ ಪದಾಧಿಕಾರಿಗಳು ಹಾಗು ಪವರ್ ಮ್ಯಾನ್‌ಗಳು ಭಾಗವಹಿಸಿದ್ದರು.

# ಪ್ರತಿ ವರ್ಷ ಉದ್ಯೋಗ ಮೇಳ: ಸಂಸದ

» ಮೊದಲನೇ ಪುಟದಿಂದ

ಉದ್ಯೋಗ ದೊರೆಯಬೇಕು. ಕನಿಷ್ಠ ನೂರಕ್ಕೂ ಹೆಚ್ಚು ಮಂದಿಗೆ ನೇರವಾಗಿ ಉದ್ಯೋಗ ಕಲ್ಪಿಸುವ ಗುರಿ ಹೊಂದಬೇಕು ಎಂದು ಹೇಳಿದರು.

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ ಅವರು ಮಾತನಾಡಿ, ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಜೊತೆಗೆ ಅವರ ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. 200ಕ್ಕೂ ಹೆಚ್ಚು ಕಂಪನಿಗಳು ನೋಂದಣಿ ಮಾಡಿಕೊಂಡಿದ್ದು, ಸುಮಾರು 180 ಕಂಪನಿಗಳು ಮೇಳದಲ್ಲಿ ಭಾಗವಹಿಸಿವೆ ಎಂದು ಮಾಹಿತಿ ನೀಡಿದರು. ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ ಉದ್ಯೋಗ ಮೇಳಕ್ಕೆ ಆನ್‌ಲೈನ್ ಮೂಲಕ ಸುಮಾರು 4 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಸ್ಥಳದಲ್ಲಿ 3000 ಸಾವಿರ ಯುವಕ ಯುವತಿಯರು ಭಾಗವಹಿಸಿದ್ದಾರೆ. ಜಿಲ್ಲೆಯ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ, ವಿಶೇಷ ಚೇತನರಿಗೆ ಶೇ.5ರಷ್ಟು ಮೀಸಲಾತಿಯೂ ಕಲ್ಪಿಸಲಾಗಿದೆ ಎಂದು ಹೇಳಿದರು.



ಜಿಲ್ಲೆಯ ಮಕ್ಕಳು ಉತ್ತಮ ಉದ್ಯೋಗದಲ್ಲಿರಬೇಕು ಆರ್ಥಿಕತೆ ವೃದ್ಧಿಸಿ ವೃದ್ಧಿಸಿಕೊಂಡು ದೇಶದ ಆರ್ಥಿಕತೆ ಕೊಡುಗೆಯನ್ನು ನೀಡುವ ಮೂಲಕ ಪ್ರಗತಿ ಪರ ರಾಷ್ಟ್ರವನ್ನಾಗಿಸಬೇಕು, ಯುವ ಜನತೆ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಅಮೂಲ್ಯವಾದವು ಜೀವನವನ್ನು ರೂಪಿಸಿಕೊಳ್ಳಬೇಕು ಎಂದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಒಂದೇ ಸೂರಿನಡಿಯಲ್ಲಿ ಹಲವು ಕಂಪನಿಗಳು ಭಾಗವಹಿಸಿರುವುದು ಯುವಕರ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗಿದೆ ಈ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಆಯ್ಕೆಯಾದ 5 ಅಭ್ಯರ್ಥಿಗಳಿಗೆ ಸಾಂಕೇತಿಕವಾಗಿ ನೇಮಕಾತಿ ಪತ್ರಗಳನ್ನು ವಿತರಿಸಲಾಯಿತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣ, ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನ ಪ್ರಾಂಶುಪಾಲ ಗಿರೀಶ್ ಉಪಸ್ಥಿತರಿದ್ದರು.

# ಮಹಿಳಾ ಸಬಲೀಕರಣದಿಂದ ಸಾಮಾಜಿಕ ಸ್ವಾಸ್ಥ್ಯ ಸದೃಢ

• ಪ್ರಜೋದಯ ವರದಿ

**ಆಲೂರು:** ಮಹಿಳೆ ಹೆಚ್ಚೆಚ್ಚು ಸಬಲೀಕರಣಗೊಂಡಷ್ಟು ಸಾಮಾಜಿಕ ಸ್ವಾಸ್ಥ್ಯ ಸದೃಢಗೊಂಡು ಕೌಟುಂಬಿಕ ಔನತ್ಯ ಸಾಧಿಸಲು ಸಹಕಾರಿಯಾಗುತ್ತದೆ ಎಂದು ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಹಾಯಕ ಆಯುಕ್ತ ಎಂ.ಬಾಲಕೃಷ್ಣ ಅಭಿಪ್ರಾಯಪಟ್ಟರು.




ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರಿಯ ಮಹಿಳಾ ದಿನಾಚರಣೆಯನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್ ಅವರ ನೇತೃತ್ವದಲ್ಲಿ ಆಲೂರು ತಾಲ್ಲೂಕಿನಲ್ಲಿ ಸ್ಕೌಟ್ಸ್ ಗೈಡ್ಸ್ ಉತ್ತಮವಾಗಿ ಸಾಗುತ್ತಿದೆ. ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಶಿಕ್ಷಕಿಯರಿಗಾಗಿ ವಿವಿಧ ಮನೋರಂಜನಾ ಆಟಗಳನ್ನು ಆಡಿಸಿ ಬಹುಮಾನ ನೀಡುತ್ತಿರುವುದು ವೃತ್ತಿ ಜೀವನದ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಪುಷ್ಠಿ ನೀಡುತ್ತದೆ. ಅಜ್ಜಿಯಾಗಿ, ತಾಯಿಯಾಗಿ, ಗುರುವಾಗಿ, ಅಕ್ಕಳಾಗಿ, ತಂಗಿಯಾಗಿ, ಹೆಂಡತಿಯಾಗಿ, ಗೆಳತಿಯಾಗಿ ಜೀವನದ ಪ್ರತಿ ಹೆಜ್ಜೆಯಲ್ಲೂ ಮಹಿಳೆಯ ಧೀಶಕ್ತಿ ನಮ್ಮ ಜೊತೆಗಿರುತ್ತದೆ. ಭಾರತ್ ಸ್ಕೌಟ್ಸ್ ಗೈಡ್ಸ್ ಶಿಸ್ತು, ಸಂಯಮ, ಸೇವೆ ಕಲಿಸುವುದರ ಜೊತೆಗೆ ಕೌಟುಂಬಿಕ ಮೌಲ್ಯಗಳನ್ನು ಕಲಿಸುತ್ತಿದೆ ಎಂದರು.

ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್ ಮಾತನಾಡಿ, ಮಹಿಳಾ ಕಾರ್ಮಿಕರ ಸಮಾನತೆಯ ಹಕ್ಕುಗಳಿಗಾಗಿ ಲಂಡನ್ನಿನಲ್ಲಿ ಹದಿನೆಂಟನೇ ಶತಮಾನದಲ್ಲಿ ಪ್ರಾರಂಭವಾದ ಹೋರಾಟ ತದನಂತರ ವಿವಿಧ ಆಯಾಮಗಳನ್ನು ಪಡೆದುಕೊಂಡು ಇಂದು ಜಾಗತಿಕವಾಗಿ ವ್ಯಾಪಿಸಿದೆ. ಅವಕಾಶ, ಶಿಕ್ಷಣ, ಉದ್ಯೋಗ, ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ ಮಾಡುವುದರಿಂದಲೇ ಹೋರಾಟದ ಅನಿವಾರ್ಯತೆ ಎದುರಾಗುತ್ತದೆ. ಇಂದು ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತವಾಗದೇ ಆಟೋ ಚಾಲನೆ, ಪೌರಕಾರ್ಮಿಕ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ, ರಾಷ್ಟಪತಿಯಿಂದ ಹಿಡಿದು ಪೈಲಟ್ ಹಾಗೂ ಬಾಹ್ಯಾಕಾಶದಲ್ಲಿ ಸಂಶೋಧನೆ ಮಾಡುವ ಹಂತದವರೆಗೂ ಛಾಪನ್ನು ಮೂಡಿಸಿ ಸಾಧಿಸಿ ತೋರಿಸಿದ್ದಾಳೆ ಎಂದರು.

ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಕೇಂದ್ರದ ಕಿರಿಯ ತರಬೇತಿ ಅಧಿಕಾರಿ ಸಿ.ಎಸ್.ಶಿವಕುಮಾರ್ ಅವರು ಮಾತನಾಡಿ, ಮಹಿಳೆ ಕೇವಲ ಮನೆಗೆ ಸೀಮಿತವಲ್ಲ, ಅವಳು ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಯಶಸ್ಸು ಸಾಧಿಸುತ್ತಾಳೆ. ಸಮಾಜದ ಗೌರವವನ್ನು ಕಾಪಾಡುತ್ತಾಳೆ. ನಿಜವಾದ ಸಮಾಜದ ಪ್ರಗತಿಯಾಗುವುದೇ ಮಹಿಳೆಯರ ಕಾರ್ಯಕ್ಷಮತೆಯಿಂದ ಎಂದರು.

ಶಾಲಾ ಮುಖ್ಯ ಶಿಕ್ಷಕಿ ಪವಿತ್ರ ಮಾತನಾಡಿ, ಭಾರತ್ ಸ್ಕೌಟ್ಸ್ ಗೈಡ್ಸ್ ನಮ್ಮ ಶಾಲೆಯಲ್ಲಿ ಉತ್ತಮ ಕಾರ್ಯ ಮಾಡುತ್ತಿದೆ. ಮಕ್ಕಳ ವಿವಿಧ ಚಟುವಟಿಕೆಗಳು ಸಾಮಾನ್ಯ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತವೆ ಎಂದು ಅವರ ಅಭಿಪ್ರಾಯಪಟ್ಟರು.

ಶಿವಕುಮಾರ್, ರಂಗೇಗೌಡ, ಪವಿತ್ರ, ರಾಮ ಚಂದ್ರು, ಶಕುಂತಲಾ, ರೋಹಿಣಿ, ಶಿಲ್ಪಶ್ರೀ, ಸೌಮ್ಯ, ಸುಮಿತ್ರ, ರಂಜಿತಾ ಹಾಗೂ ಬೈರಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೈಡ್ ಕ್ಯಾಪ್ಟನ್ ಅಶ್ವಿನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕುಸಿಯುತ್ತಿರುವ ಮಕ್ಕಳ ದಾಖಲಾತಿ ವೃದ್ಧಿಸಿಕೊಳ್ಳುವ ಸಲುವಾಗಿ ಶಿಕ್ಷಕರ ಭವನದಲ್ಲಿ ಆಯೋಜನೆ

# ಸರ್ಕಾರಿ ಶಾಲೆಗಳಲ್ಲಿನ ಸವಲತ್ತುಗಳ ಬಗ್ಗೆ ಪೋಷಕರಿಗೆ ಮಾಹಿತಿ

• ಪ್ರಜೋದಯ ವರದಿ

**ಅರಕಲಗೂಡು:** ಶಿಕ್ಷಣ ಇಲಾಖೆ ಶೈಕ್ಷಣಿಕ ಸಾಲಿನ ಅಂತಿಮ ಹಂತದಲ್ಲಿಯೇ ಸರ್ಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿಯನ್ನು ವೃದ್ಧಿಸಿಕೊಳ್ಳುವ ಸಲುವಾಗಿ ಸರಕಾರಿ ಶಾಲೆಗಳಲ್ಲಿ ದೊರೆಯುವ ಸವಲತ್ತುಗಳು, ಮಕ್ಕಳ ಕ್ರೀಡಾ ಕ್ಷೇತ್ರದಲ್ಲಿನ ಸಾಧನೆ, ಬಿಸಿಯೂಟ ಯೋಜನೆಯ ಪ್ರಯೋಜನ ಹಾಗೂ ತಾಂತ್ರಿಕವಾಗಿ ಕೈಗೊಂಡಿರುವ ವಿಜ್ಞಾನ ಪ್ರಯೋಗ ಲ್ಯಾಬ್ ಸೇರಿದಂತೆ ಇತರೆ ಪರಿಕರಗಳನ್ನು ಶಿಕ್ಷಕರ ಭವನದ ಆವರಣದಲ್ಲಿ ಸ್ಟಾಲ್‌ಗಳಲ್ಲಿ ನಿರ್ಮಿಸಿ ಪೋಷಕರನ್ನು ಆಕರ್ಷಣೆ ಮಾಡುವಲ್ಲಿ ಯಶಸ್ವಿಯಾಯಿತು.

ಇದಲ್ಲದೆ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಶಾಸಕರ ಪತ್ನಿ ತಾರಾ ಮಂಜುಗೌಡ ಅವರ ದೇವರ ಹಟ್ಟಿ ಟ್ರಸ್ಟ್ ಸಹಯೋದಲ್ಲಿ ಆರಂಭಿಸಿರುವ ಮಕ್ಕಳ ಮನೆಯ ಪುಟಾಣಿಗಳ ವಾರ್ಷಿಕೋತ್ಸವ ಸಮಾರಂಭವನ್ನು ಅದ್ದೂರಿಯಾಗಿ ಆಯೋಜನೆ ಮಾಡಿ ಅಲ್ಲಿ ಕಲಿಯುತ್ತಿರುವ ಮಕ್ಕಳು ಸರಕಾರಿ ಶಾಲೆಯಲ್ಲಿಯೇ ಮುಂದುವರಿಸುವ ಉತ್ತೇಜಿಸುವ ಕಾರ್ಯಕ್ರಮವನ್ನು ಸಹ ಆಯೋಜನೆ ಮಾಡಲಾಗಿತ್ತು.

ದಾಖಲಾತಿ ಆಂದೋಲನಾ ಸಲುವಾಗಿ ಇಡೀ ಶಿಕ್ಷಕರ ಪ್ರಾವಿಣ್ಯತೆಯನ್ನು ಪೋಷಕರಲ್ಲಿನಂಬಿ ಮೂಡಿಸುವ ಸಲುವಾಗಿ ಸ್ಟಾಲ್‌ಗಳಲ್ಲಿ ಇರಿಸಿದ್ದ ಶೈಕ್ಷಣಿಕ ಪರಿಕರಗಳ ಪರಿಚಯ ಮತ್ತು ಅವುಗಳಿಂದ ಮಕ್ಕಳಿಗೆ ಪ್ರಯೋಜನವಾಗುವ ವಿಷಯಗಳನ್ನು ಸಹ ತಿಳಿಸುವ ಕೆಲಸ ನಡೆಯಿತು. ಪೋಷಕರು, ವಿದ್ಯಾರ್ಥಿಗಳು ಸ್ಟಾಲ್‌ಗಳಲ್ಲಿನ ಪರಿಕರಗಳನ್ನು ವೀಕ್ಷಣೆ ಮಾಡಿ ಸಂತಸಗೊಂಡರು. ಅಲ್ಲದೆ ಸರ್ಕಾರಿ ಶಾಲೆಗೆ ಸೇರಿಸುವ ಮಕ್ಕಳನ್ನು ಸೇರಿಸುವ ವಿಶ್ವಾಸದ ಇಂಗಿತವನ್ನು ಪುಸ್ತಕದಲ್ಲಿ ಸಹಿ ಮಾಡುವ ಮೂಲಕ ಭರವಸೆ ನೀಡಿದ್ದು ವಿಶೇಷವಾಗಿತ್ತು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮವನ್ನು ಶಾಸಕರ ಧರ್ಮಪತ್ನಿ ತಾರಾ ಮಂಜುಗೌಡ ಉದ್ಘಾಟಿಸಿದರು. ವಿಧಾನಸಭಾ ಕ್ಷೇತ್ರದ ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಮಕ್ಕಳ ಮನೆ ತೆರೆಯುವ ಉದ್ದೇಶವನ್ನು ಹೊಂದಲಾಗಿದೆ. ಈಗಾಗಲೇ 18 ಸರಕಾರಿ ಶಾಲೆಗಳಲ್ಲಿ ಮಕ್ಕಳ ಮನೆ ಕಾರ್ಯನಿರ್ವಹಿಸುತ್ತಿವೆ. ಸುಮಾರು 300ಮಕ್ಕಳು ಎಲ್‌ಕೆಜಿ, ಯುಕೆಜಿ ಕಲಿಯುತ್ತಿದ್ದಾರೆ. ಈ ಶಾಲೆಗಳಿ ಬೇಕಿರುವ ಅಗತ್ಯತೆಗಳನ್ನು ದೇವರ ಹಟ್ಟಿ ಟ್ರಸ್ಟ್ ವತಿಯಿಂದ ಒದಗಿಸಲಾಗುತ್ತಿದೆ ಎಂದು ಹೇಳಿದರು.



ಶಾಸಕ ಎ.ಮಂಜು ಅವರು ಮಾತನಾಡಿ, ದೇಶದ ಅಭಿವೃದ್ಧಿಗೆ ಶಿಕ್ಷಣ ಅತೀ ಮುಖ್ಯವಾಗಿದೆ. ಈ ಸಲುವಾಗಿ ನಮ್ಮ ಟ್ರಸ್ಟ್ ವತಿಯಿಂದ ಮಕ್ಕಳ ಮನೆ ಆರಂಭಿಸಿ ಪ್ರೋತ್ಸಾಹಿಸುತ್ತಿದ್ದೇವೆ. ಇದು ಸರಕಾರಿ ಶಾಲೆಗಳ ಉಳಿವು ಅಭಿವೃದ್ಧಿಗೆ ಉತ್ತೇಜಿತವಾಗಿದೆ ಎಂದು ತಿಳಿಸಿದರು.

ಇನ್ನಾದರೂ ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹ ಬಿಡಿ ಅತೀ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿರುವುದನ್ನು ಪಡೆದುಕೊಳ್ಳಿ, ಮಕ್ಕಳ ಮನೆಯಿಂದ ಸರ್ಕಾರಿ ಶಾಲೆ ಕಡೆ ಗಮನ ಸೆಳೆಯುವ ಉದ್ದೇಶ ಹಾಗೂ ಉತ್ತಮ ಶಿಕ್ಷಣ ನೀಡುವುದೇ ನಮ್ಮ ಪ್ರಮುಖ ಉದ್ದೇಶ. ಎಲ್ಲಾ ಪೋಷಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ ಸೇರಿಸುವಂತೆ ಮನವಿ ಮಾಡಿದರು.

ಬಿಗ್ ಬಾಸ್ ಖ್ಯಾತಿ ಧ್ರುವಂತ್ ಮಾತನಾಡಿ, ಸರ್ಕಾರಿ ಶಾಲೆ ಉಳಿಸುವ ಇಂತಹ ಕಾರ್ಯಕ್ರಮ ರಾಜ್ಯದಲ್ಲೆ ಪ್ರಥಮ ಈ ಕಾರ್ಯಕ್ರಮಕ್ಕೆ ನಾನು ಎಂದು ಸ್ಪಂದಿಸುವೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ ಅವರು ಮಾತನಾಡಿ, ಶಾಸಕರ ಸಹಕಾರದಿಂದ ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ನಮ್ಮ ಶಿಕ್ಷಕರು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಲುವಾಗಿಯೇ ಇಂದಿನಿಂದಲೇ ದಾಖಲಾತಿ ಆಂದೋಲನವನ್ನು ಹೋಬಳಿ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ. ಮಕ್ಕಳ ಮನೆ ಪೂರ್ವ ಪ್ರಾಥಮಿಕ ಶಾಲೆಯಿಂದ ನಮ್ಮ ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಪ್ರಯೋಜನವಾಗುತ್ತಿದೆ. ಕಳೆದ ವರ್ಷದಿಂದ ನಮ್ಮ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚುತ್ತಿದೆ. ಈ ಬಾರಿ ನಿರೀಕ್ಷಿತ ಮಟ್ಟದಲ್ಲಿ ದಾಖಲಾತಿ ಮಾಡುವ ವಿಶ್ವಾಸವನ್ನು ಹೊಂದಲಾಗಿದೆ ಎಂದು ಹೇಳಿದರು.

ಸಿಡಿಪಿಓ ವೆಂಕಟೇಶ್, ಅಕ್ಷರ ದಾಸೋಹ ಅಧಿಕಾರಿ ರಂಗಸ್ವಾಮಿ, ಡಾ.ಅಶೋಕ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಧಾನಸಭಾ ವ್ಯಾಪ್ತಿಯ 18 ಮಕ್ಕಳ ಮನೆಯ ಪುಟಾಣಿಗಳಿಂದ ವಿವಿಧ ನೃತ್ಯ,ರೂಪಕ,ಭಾಷಣ ಹಾಗೂ ಮಕ್ಕಳ ಮನೆ ಶಿಕ್ಷಕರಿಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

## ಮಹಿಳಾ ಚಳುವಳಿ ದೃಢವಾಗಲಿ




» ಒಂದನೇ ಪುಟದಿಂದ

ದಲ್ಲಿಯೇ ಮುಂದುವರಿಯಬೇಕು ಎಂದು ಒತ್ತಾಯಿಸಿದರು.

ವೈದ್ಯೆ ಡಾ. ಹೆಚ್.ಎಸ್. ಅನುಪಮ ಅವರು ಮಾತನಾಡಿ, ಗುಜರಾತ್ ಅನ್ನು 56 ಇಂಚಿನ ಎದೆ ಎಂಬ ರಾಜಕೀಯ ಘೋಷಣೆಯಿಂದಲ್ಲ, ದೌರ್ಜನ್ಯಕ್ಕೆ ವಿರುದ್ಧವಾಗಿ ನಿಂತ ಮಹಿಳೆಯರ ಹೋರಾಟಗಳಿಂದ ಗುರುತಿಸಬೇಕು. ತಮ್ಮ ಮೇಲೆ ನಡೆದ ಲೈಂಗಿಕ ದೌರ್ಜನ್ಯಕ್ಕೆ ವಿರುದ್ಧವಾಗಿ ಹೋರಾಡಿ ನ್ಯಾಯ ಪಡೆದ ಬಿಲ್ಕಿಸ್ ಬಾನು, ದಿಟ್ಟ ಪತ್ರಕರ್ತೆ ತೀಸ್ತಾ ಸೆಟಲ್ವಾಡ್, ಹೋರಾಟಗಾರ್ತಿಯರಾದ ಮೇಧಾ ಪಾಟ್ಕರ್ ಹಾಗು ಜಕೀಯಾ ಸೋಮನ ಅವರಂತಹ ಮಹಿಳೆಯರು ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ಹೇಳಿದರು.

ಸಮಾವೇಶದ ಅಧ್ಯಕ್ಷತೆಯನ್ನು ಸಾಹಿತಿ ರೂಪಾ ಹಾಸನ ವಹಿಸಿದ್ದರು. ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ಮಮತಾ ನಿರಂಜನ, ಬಾ.ಹ.ರಮಾ, ಅರ್ಚನಾ ಜಯಂತ್, ಪ್ರಭಾವತಿ ದೇಸಾಯಿ, ಸುಜಾತ ಕುಮಾರ ಸ್ವಾಮಿ, ಮಮತರಾಣಿ, ಸೌಮ್ಯ, ಶಾನು, ಧರಣಿ, ರಶ್ಮಿ, ನಾಗಮ್ಮ ಬೈಂದೂರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019